ಜನಪದ ವಿಚಾರ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ


ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೯ ಏಪ್ರಿಲ್-೨೦೦೯ ಸಂಚಿಕೆ-೯



ಭಾರತ ಅಂದು ಅಂಡರ್ ಡಾಗ್,
ಇಂದು ಸ್ಲಂ ಡಾಗ್!



ಜನಪದ ವಿಚಾರದಲ್ಲಿ

ಮಾರ್ಚ್-2009

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಏಪ್ರಿಲ್ - ೨೦೦೯
ಸಂಪುಟ - ೯
ಸಂಚಿಕೆ - ೯

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆08236 316344

e-mail : janapada@yahoo.com
web: janapada.net

ಯುಗಾದಿಯ ಹಾಡು

ಏಳಿ ರವಿಯು ಮೂಡುವೊಳಗೆ
ಬಾನ ತಳಿರು ಬಾಡುವೊಳಗೆ
ಇಂದು ಮಧುವು ಜನವ, ಜಗವ
ಮುದದಿ ತೇಲಿಸುತ್ತ ಬರುವ!
ಇಂದು ಯು-ಗಾದಿಯು
ಹೊಸ ವರ್ಷದಾದಿಯು!

ಬೇವು ಚಿಗುರ, ಹೂವ, ಹಣ್ಣ,
ಮಾವು ತಳಿರ ತನ್ನಿರಣ್ಣ
ದಿಟ್ಟ ಕಚ್ಚೆ ಹಾಕಿ, ಶಿಖೆಗೆ
ದವನ ಸುರಗಿ ಸೆಕ್ಕಿರಣ್ಣ.
ಹಹ್ಹೊ! ಯು-ಗಾದಿಯು,
ಹರುಷಕೆಲ್ಲ ಗಾದಿಯು!

ಹಳೆಯದೆಲ್ಲ ಮರೆಯಿರೈ,
ಹೊಸದು ಬಾಳ ತೆರೆಯಿರೈ,
ಕಳೆದು ವರಷಕಿಂದು ಒಂದೆ
ಕಣ್ಣ ಹನಿಯ ಸಲಿಸಿರೈ.

ಮುಪ್ಪು ಹರೆಯ ಮರೆಯುತ,
ಬೆಪ್ಪ, ಜಾಣ ಬೆರೆಯುತ-
ಲಗ್ಗೆಚೆಂಡು, ಚಿಣ್ಣಿ ಕೋಲು,
ಏಣಿ ಉಯ್ಯಲಾಡಿರೈ.

ಹಬ್ಬದೂಟ ಉಣುವ ಮುನ್ನ
ಬೇವುಬೆಲ್ಲ ಸವಿಯರಣ್ಣ;
"ನೂರು ವರಷ ಬಾಳುವ,
ಸಾವ ದೂರಮಾಡುವ,
ವಜ್ರಕಾಯರಾಗುವ,
ಸಿರಿಯ ಸುಖವ ಕಾಣುವ"
ಎಂದು ಬೆಲ್ಲ ಮುಂದುಮಾಡಿ
ಬೇವು ಬೆಲ್ಲ ಮೆಲ್ಲಿರಣ್ಣ.

- ಪು.ತಿ.ನ

ವಿಚಾರ ದೀಪ್ತಿ

ಹಿಮಾಲಯದಲ್ಲಿ ಅಣೆಕಟ್ಟು !

ಭಾರತದ ಶ್ರೇಷ್ಠ ವಿಜ್ಞಾನಿಗಳಲ್ಲಿ ಒಬ್ಬರಾದ ಎ.ಡಿ.ಅಗರವಾಲ್ ತಮ್ಮ ೭೭ನೇ ವಯಸ್ಸಿನಲ್ಲಿ ಮೂವತ್ತೆಂಟು ದಿನಗಳ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದರು. ಇನ್ನೇನು ಅವರು ಮೃತ್ಯುವಿನ ಬಾಗಿಲು ತಲುಪಿದ್ದರು. ಆಗ ಹಿಮಾಲಯದಲ್ಲಿ ನಿರ್ಮಿಸಲಾಗುತ್ತಿರುವ ಮುಖ್ಯ ವಿದ್ಯುತ್ ಉತ್ಪಾದನಾ ಅಣೆಕಟ್ಟಿನ ಕೆಲಸವನ್ನು ನಿಲ್ಲಿಸಲಾಯಿತು. ಗಂಗೆಯ ಉಪನದಿಯೊಂದಕ್ಕೆ ಅಡ್ಡಲಾಗಿ ಈ ಅಣೆಕಟ್ಟನ್ನು ಕಟ್ಟಲಾಗುತ್ತಿತ್ತು. ಅದನ್ನು ವಿರೋಧಿಸಿ ದಿಲ್ಲಿಯ ಐ.ಐ.ಟಿಯಲ್ಲಿ ಡೀನ್ ಆಗಿದ್ದ ಅಗರವಾಲ್‌ರವರು ಎರಡನೆಯ ಬಾರಿಗೆ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದರು. ಹರಿಯುವ ನೀರನ್ನು ತಡೆಯದೆ ವಿದ್ಯುತ್‌ಚ್ಛಕ್ತಿಯನ್ನು ಹೇಗೆ ಉತ್ಪಾದಿಸಬಹುದು ಎಂಬ ವಿಷಯವಾಗಿ ತನ್ನ ತನಿಖೆಯನ್ನು ತ್ವರಿತಗೊಳಿಸುವುದಾಗಿ ಸರ್ಕಾರ ಮಾತು ಕೊಟ್ಟ ಮೇಲೆ ಅಗರವಾಲ್ ತಮ್ಮ ಸತ್ಯಾಗ್ರಹವನ್ನು ನಿಲ್ಲಿಸಿದರು. ನದಿಯ ನೀರು ಸ್ವಚ್ಛಂದವಾಗಿ ಹರಿಯುವುದರಲ್ಲಿಯೇ ಹಿಮಾಲಯದ ಪಾವಿತ್ರ್ಯತೆಯಿದೆ. ಹಿಮಾಲಯದಲ್ಲಿ ಹರಿವ ನೀರು ಹಿಂದುಗಳಿಗೆ ಸಾಮಾನ್ಯ ನೀರಲ್ಲ. ಹಿಂದೂ ಧರ್ಮದ ಪ್ರಕಾರ ಹಿಮಾಲಯದಲ್ಲಿಯ ನದಿಗಳು ಜೀವನ್ಮರಣದ ಸಂಗತಿ. ಹೀಗೆ ಅಗರವಾಲ್‌ರವರು ತಮ್ಮ ಉಪವಾಸ ಪ್ರಾರಂಭಿಸುವ ಮುಂಚೆ ಕಳೆದ ಜನವರಿಯಲ್ಲಿ ಹೇಳಿದ್ದರು. ಆರುನೂರು ಮೆಗಾವ್ಯಾಟ್ ಸಾಮರ್ಥ್ಯದ ಲೋಹರಿನಾಗ್-ಪಾಲ ಯೋಜನೆ ಭಾರತ, ಪಾಕಿಸ್ತಾನ, ನೇಪಾಳ ಮತ್ತು ಭೂತಾನ್ ದೇಶಗಳು ಸೇರಿ ಕಟ್ಟುತ್ತಿರುವ ಅನೇಕ ಯೋಜನೆಗಳಲ್ಲಿ ಒಂದು. ಈ ಎಲ್ಲಾ ಯೋಜನೆಗಳಿಂದ ಒಂದು ಲಕ್ಷದ ಐವತ್ತು ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪನ್ನಗೊಂಡು ವಿದ್ಯುತ್ ಅಭಾವವಿರುವ ದೇಶಗಳ ಕೊರತೆಯನ್ನು ನೀಗಿಸುವವು. ಆದರೆ ತಜ್ಞರ ಪ್ರಕಾರ ಈ ಅಣೆಕಟ್ಟುಗಳಿಂದ ಪರಿಸರದ ಮೇಲೆ ಬಹುದೊಡ್ಡ ದುಷ್ಪರಿಣಾಮ ಉಂಟಾಗಿ ಅಲ್ಲಿಯ ಲಕ್ಷಾಂತರ ಜನರ ಜೀವನಕ್ಕೂ ಧಕ್ಕೆ ಒದಗುವುದು. 'ಅಂತರ ರಾಷ್ಟ್ರೀಯ ನದಿಗಳು' ಎಂಬ ಹೆಸರಿನ ಸರ್ಕಾರೇತರ ಸಂಸ್ಥೆಗಳ ಇತ್ತೀಚಿನ ವರದಿಯ ಪ್ರಕಾರ ಈ ಅಣೆಕಟ್ಟುಗಳು ಮೂಲಭೂತವಾಗಿ ಹಿಮಾಲಯದ ಪ್ರಕೃತಿ ಸೌಂದರ್ಯವನ್ನು, ಪ್ರಾಕೃತಿಕ ಸಮತೋಲನವನ್ನು ಮತ್ತು ಆ ಪ್ರದೇಶದ ಅರ್ಥ ವ್ಯವಸ್ಥೆಯನ್ನೇ ಬದಲಾಯಿಸಿ ಬಿಡುವವು. ಅಲ್ಲದೆ ಲಕ್ಷಾಂತರ ಜನರನ್ನು ಉಚ್ಚಾಟಿತಗೊಳಿಸುವುವು. ಜಲ ಮತ್ತು ವಿದ್ಯುತ್‌ಚ್ಛಕ್ತಿಯ ಸಂಬಂಧವಾಗಿ ಏಷ್ಯಾದ ತಜ್ಞರಲ್ಲಿಯೇ ಹಿರಿಯರಾದ ಶ್ರೀಪಾದ್ ಧರ್ಮಾಧಿಕಾರಿ ಈ ರೀತಿ ಹೇಳುತ್ತಾರೆ. ಹಿಮಾಲಯದಲ್ಲಿಯ ನದಿಗಳಿಗೆ ಅಣೆಕಟ್ಟನ್ನು ಕಟ್ಟುವುದರಿಂದಲೂ, ಅವುಗಳ ಪ್ರವಾಹದ ದಿಕ್ಕನ್ನು ಬದಲಾಯಿಸುವುದರಿಂದಲೂ ಖಂಡಿತವಾಗಿ ಕೆಳಗಿನ ಪ್ರದೇಶದ ನೀರಿನ ಹರಿವಿನಲ್ಲಿ ಚ್ಯುತಿ ಉಂಟಾಗುತ್ತದೆ. ಇದರ ಪರಿಣಾಮವಾಗಿ ವ್ಯವಸಾಯ ಮತ್ತು ಮೀನುಗಾರಿಕೆ ಆಘಾತಕ್ಕೆ ಒಳಗಾಗಿ ಇಡೀ ಜನ ಸಮುದಾಯದ ಬದುಕೇ ಅಪಾಯಕ್ಕೊಳಗಾಗುತ್ತದೆ. ಈಗಾಗಲೇ ಯೋಜಿಸಲಾಗಿರುವ ಎಲ್ಲಾ ಯೋಜನೆಗಳು ಪೂರ್ಣಗೊಂಡರೆ ಹಿಮಾಲಯ ವಿಶ್ವದಲ್ಲಿಯೇ ಅತ್ಯಂತ ಗರಿಷ್ಠ ಸಂಖ್ಯೆಯ ಅಣೆಕಟ್ಟುಗಳನ್ನು ಹೊಂದಿರುವ ಪ್ರದೇಶವಾಗುವುದು. ಅಣೆಕಟ್ಟುಗಳು, ಸುರಂಗಮಾರ್ಗಗಳು, ವಿದ್ಯುತ್‌ವಾಹಕ ತಂತಿಗಳು ಮತ್ತು ಇತರೆ ಈ ಸಂಬಂಧಿತ ನಿರ್ಮಾಣ ಕೆಲಸಗಳು ಸಾವಿರಾರು ಮನೆಗಳನ್ನು, ನದಿಗಳನ್ನು, ಕಾಡಗಳನ್ನು, ಆಧ್ಯಾತ್ಮಿಕ ಕ್ಷೇತ್ರಗಳನ್ನು ಹಾಗು ವಿಶ್ವದ ಅತ್ಯಂತ ಎತ್ತರದ ಹೆದ್ದಾರಿ ಕಾರಕೋರಮ್‌ನ್ನು ನಾಶಮಾಡುವುವು ಅಲ್ಲದೆ ವಾತಾವರಣದಲ್ಲಿ ಉಷ್ಣತೆಯನ್ನೂ ಉಂಟುಮಾಡಿ ಅಣೆಕಟ್ಟುಗಳಿಂದ ನಿರೀಕ್ಷಿಸಲಾದ ವಿದ್ಯುತ್ ಉತ್ಪಾದನೆ ಕಡಿಮೆಯಾಗುವುದು. ಏಕೆಂದರೆ ಹಿಮಾಚ್ಛಾದಿತ ಪ್ರದೇಶ ಕರಗುವುದರಿಂದ ಹರಿದು ಬರುವ ನೀರಿನ ಜೊತೆಗೆ ಮಣ್ಣು ಸಹ ಅಣೆಕಟ್ಟುಗಳಲ್ಲಿ ತುಂಬಿ ಅವುಗಳ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಕಡಿಮೆಗೊಳ್ಳುವುದು.

– ಜಾನ್ ವಿಡಾಲ್

ಭಾರತ ಅಂದು ಅಂಡರ್ ಡಾಗ್, ಇಂದು ಸ್ಲಂ ಡಾಗ್!

– ಸುರೇಂದ್ರ ಕೌಲಗಿ

೧೯೩೧ ರಲ್ಲಿ ಗಾಂಧೀಜಿ ತಮ್ಮ ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಭಾರತ ಇಂಗ್ಲಿಷರ ದೃಷ್ಟಿಯಲ್ಲಿ ಅಂಡರ್ ಡಾಗ್ ಆಗಿದೆಯೆಂದು ತುಂಬ ನೋವಿನಿಂದ ಬರೆದಿದ್ದರು. ಹಾಗೆ ಬರೆಯುವಾಗ ಇಂಗ್ಲಿಷರ ಆಳ್ವಿಕೆಗೆ ಸಿಕ್ಕ ಭಾರತ ಎಂಥ ಘೋರವಾದ ಶೋಷಣೆಗೆ ಒಳಗಾಗಿತ್ತು ಎಂಬ ಸಂಗತಿಯಿಂದ ಅವರ ಹೃದಯ ಭಾರವಾಗಿತ್ತು. ಭಾರತ ಹೇಗೆ ಇಂಗ್ಲಿಷರ ಕೈಯಲ್ಲಿ ಅಂಡರ್ ಡಾಗ್ ಸ್ಥಿತಿಯಲ್ಲಿದೆಯೆಂಬುದನ್ನು ಗಾಂಧೀಜಿ ಈ ಮಾತುಗಳಲ್ಲಿ ಹೇಳಿದ್ದಾರೆ, "ಇಂದು ಪರಿಸ್ಥಿತಿ ಹೇಗಿದೆಯೆಂದರೆ ಬ್ರಿಟಿಷರು ಟಾಪ್ ಡಾಗ್ ಆಗಿದ್ದಾರೆ. ಭಾರತೀಯ ತನ್ನದೇ ದೇಶದಲ್ಲಿ ಅಂಡರ್ ಡಾಗ್ ಆಗಿದ್ದಾನೆ. ತಾನು ಆಳುವ ವರ್ಗಕ್ಕೆ ಸೇರಿದವನೆಂಬ ಕಾರಣದಿಂದ ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿ ಇಂಗ್ಲಿಷ್ ಮನುಷ್ಯ ವಿಶೇಷವಾದ ಸವಲತ್ತುಗಳನ್ನು ಹೊಂದಿದ್ದಾನೆ. ಯಾವುದೇ ವಿರೋಧಾಭಾಸದ ಭಯವಿಲ್ಲದೆ, ಅತಿಶಯೋಕ್ತಿಯಿಲ್ಲದೆ ಹೇಳಬಹುದಾದ ಸಂಗತಿಯೇನೆಂದರೆ ಭಾರತದ ವಾಣಿಜ್ಯ ಮತ್ತು ಕೈಗಾರಿಕೆಗಳ ವಿನಾಶದ ಮೇಲೆ ಇಂಗ್ಲಿಷ್ ಮನುಷ್ಯ ಏಳಿಗೆ ಹೊಂದಿದ್ದಾನೆ. ಲ್ಯಾಂಕ್‌ಶೈಯರ್‌ದ ಅಭಿವೃದ್ಧಿಗಾಗಿ ಭಾರತದ ಗೃಹಕೈಗಾರಿಕೆಗಳು ನಾಶ ಹೊಂದಬೇಕಾಯಿತು. ಬ್ರಿಟಿಷರ ನೌಕಾ ವ್ಯವಸ್ಥೆ ಅಭಿವೃದ್ಧಿ ಹೊಂದುವುದಕ್ಕಾಗಿ ಭಾರತದ ನೌಕಾ ವ್ಯವಸ್ಥೆ ನಾಶ ಹೊಂದಬೇಕಾಯಿತು. ಒಂದೇ ಮಾತಿನಲ್ಲಿ ಹೇಳುವುದಾದರೆ ಶಿಮ್ಲಾದ ಉತ್ತುಂಗದಲ್ಲಿ ಇಂಗ್ಲಿಷರು ವಾಸಿಸಲು ಸಾಧ್ಯವಾಗುವಂತೆ ಭಾರತೀಯರು ತುಳಿಯಲ್ಪಟ್ಟಿದ್ದಾರೆ." ಇಂಗ್ಲಿಷರು ಭಾರತವನ್ನು ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ದಿವಾಳಿ ಎಬ್ಬಿಸಿದ್ದರು. ಭಾರತದ ದಿವಾಳಿತನದ ಮೇಲೆ ಇಂಗ್ಲಿಷ್ ಸಾಮ್ರಾಜ್ಯ ಕೊಬ್ಬಿತ್ತು. ಆದರೆ ಭಾರತ ಮಾತ್ರ ಜಗತ್ತಿನಲ್ಲಿಯೇ ಅತ್ಯಂತ ಬಡ ದೇಶವಾಗಿತ್ತು. ಬ್ರಿಟಿಷರ ಒಡೆದು ಆಳುವ ನೀತಿಯಿಂದ ಇಡೀ ಭಾರತೀಯ ಸಮಾಜ ವಿವಿಧ ಜಾತಿಗಳಲ್ಲಿ ಕೋಮುಗಳಲ್ಲಿ, ಭಾಷೆಗಳಲ್ಲಿ, ಆರ್ಥಿಕ ವರ್ಗಗಳಲ್ಲಿ ಹರಿದು ಚಿಂದಿಯಾಗಿತ್ತು. ಭಾರತದ ಏಳಿಗೆಯಾಗಬೇಕಾದರೆ ಭಾರತ ಸ್ವತಂತ್ರವಾಗಲೇ ಬೇಕಿತ್ತು. ಈ ವಿಚಾರದಲ್ಲಿ ಇಂಗ್ಲಿಷರೊಂದಿಗೆ ಯಾವ ಒಪ್ಪಂದವೂ ಸಾಧ್ಯವಿರಲಿಲ್ಲ. ಲೋಕಮಾನ್ಯ ತಿಲಕರು ಹೇಳಿದಂತೆ ಸ್ವಾತಂತ್ರ್ಯ ಮತ್ತು ಸ್ವರಾಜ್ಯ ಭಾರತದ ಜನ್ಮ ಸಿದ್ಧ ಹಕ್ಕುಗಳಾಗಿದ್ದವು. ಬಹು ದೀರ್ಘ ಕಾಲದಿಂದಲೂ ಇಂಗ್ಲಿಷರು ನಿರಾಕರಿಸುತ್ತ ಬಂದಿದ್ದ ಸ್ವಾತಂತ್ರ್ಯವನ್ನು ಪಡೆಯಲು ಗಾಂಧೀಜಿ ಎಂಥದೇ ತ್ಯಾಗದಿಂದಲಾದರೂ ಗಂಗೆಯ ಪ್ರವಾಹದಲ್ಲಿ ಭಾರತೀಯರ ರಕ್ತದ ಕೋಡಿಯನ್ನು ಗಂಗೆಗೆ ಸೇರಿಸಲು ಸಿದ್ಧವಾಗಿದ್ದರು. ಅಷ್ಟೊಂದು ತೀವ್ರವಾಗಿತ್ತು ಗಾಂಧೀಜಿಯವರ ಸ್ವಾತಂತ್ರ್ಯದ ಅಭಿಲಾಷೆ.

ಸ್ವಾತಂತ್ರ್ಯವೇನೋ ಬಂತು. ಅದಕ್ಕೆ ೬೩ ವರ್ಷಗಳೂ ಆದವು. ಆದರೆ ದುಃಖದ ಅನೇಕ ಸಂಗತಿಗಳಲ್ಲಿ, ಇತ್ತೀಚಿನ ಸಂಗತಿಯೇನೆಂದರೆ ಸ್ವತಂತ್ರ ಭಾರತದಲ್ಲಿ "ಸ್ಲಂ ಡಾಗ್ ಮಿಲಿಯನೇರ್" ಎಂಬ ಚಲನಚಿತ್ರ ಆಸ್ಕರ್ ಪ್ರಶಸ್ತಿ ಪಡೆದದ್ದು. ಸ್ವತಂತ್ರ ಭಾರತದಲ್ಲಿ ದೇಶದ ಲಕ್ಷಾವಧಿ ಸ್ಲಂಗಳಲ್ಲಿರುವ ತಮ್ಮ ದೇಶವಾಸಿಗಳನ್ನು ಭಾರತೀಯರೇ 'ಸ್ಲಂ ಡಾಗ್' ಎಂದು ಕರೆದಿರುವುದು. ನಿಜಾರ್ಥದಲ್ಲಿ ಈ ಸ್ಲಂ ಡಾಗ್‌ಗಳು ನಗರದಲ್ಲಿರುವ ಶ್ರೀಮಂತ ವರ್ಗದ ಅಂಡರ್ ಡಾಗ್‌ಗಳೇ ಆಗಿದ್ದಾರೆ. ಸ್ವಾತಂತ್ರ್ಯ ಬಂದು ೬೩ ವರ್ಷಗಳ ನಂತರ, ೧೧ ಪಂಚವಾರ್ಷಿಕ ಯೋಜನೆಗಳ ಅನುಷ್ಠಾನದ ನಂತರ, ಹದಿನಾಲ್ಕು ಬಾರಿ ಲೋಕಸಭೆಗಳ ರಚನೆಯ ನಂತರ, ದೇಶಾದ್ಯಂತ ಮಾಹಿತಿ ತಂತ್ರಜ್ಞಾನದ ಕ್ರಾಂತಿಯಾದ ನಂತರ, ಕೈಗಾರಿಕಾ ಕ್ರಾಂತಿಯಾದ ನಂತರ, ಶೈಕ್ಷಣಿಕ ಕ್ಷೇತ್ರದಲ್ಲೂ ಕ್ರಾಂತಿಯಾದ ನಂತರ ಸ್ಲಂ ಡಾಗ್ ಎಂಬಂಥ ಪದಗುಚ್ಛ ಬಳಕೆಗೇ ಬರಬಾರದಾಗಿತ್ತು. ಇನ್ನೂ ದುಃಖದ ಸಂಗತಿಯೆಂದರೆ ಆ ಹೆಸರಿನ ಚಲನಚಿತ್ರಕ್ಕೆ ಆಸ್ಕರ್ ಪ್ರಶಸ್ತಿ ಬಂದಾಗ ದೇಶಕ್ಕೆ ದೇಶವೇ ಹುಚ್ಚೆದ್ದು ಕುಣಿಯಿತು; ದೇಶದ ರಾಜಕಾರಣಿಗಳು ನಾಚಿಕೆಯನ್ನು ಬದಿಗಿಟ್ಟು ಅದನ್ನು ಕೊಂಡಾಡಿದರು. ಯಾರಿಗೂ ನಮ್ಮೀ ದೇಶದಲ್ಲಿ ಅಸಂಖ್ಯ ಸ್ಲಂಗಳು ಏಕೆ ತಲೆ ಎತ್ತಿವೆ, ನಾವು ಭಾರತೀರು ಏನು ಅಂಥ ತಪ್ಪು ಮಾಡುತ್ತಿದ್ದೇವೆ ಎಂಬ ಆತ್ಮ ವಿಮರ್ಶಾತ್ಮಕ ಪ್ರಶ್ನೆಗಳು ಕಾಡಲೇ ಇಲ್ಲ. ಬದಲಿಗೆ ಇನ್ನೂ ಹೆಚ್ಚು ತಪ್ಪುಗಳನ್ನು ಮಾಡುತ್ತಲೇ ಹೊಗುತ್ತಿದ್ದಾರೆ. ಭಾರತ ಆರ್ಥಿಕವಾಗಿ ತತ್ತರಿಸಿದೆ; ಕಾರುಗಳು, ದೂರದರ್ಶನಗಳು, ಮೊಬೈಲ್‌ಗಳು, ಫ್ಯಾಷನ್ ಬಟ್ಟೆಗಳು ಅಗ್ಗವಾಗುತ್ತಿವೆ. ಇವೆಲ್ಲವೂ ಐಷಾರಾಮಿ ಜೀವನಕ್ಕೆ ಬೇಕಾದ ಪದಾರ್ಥಗಳು. ಆದರೆ ಜೀವನಕ್ಕೆ ಅಗತ್ಯವಾದ ಆಹಾರ ಪದಾರ್ಥಗಳ ಬೆಲೆ ಹೆಚ್ಚಾಗುತ್ತಲೇ ಇದೆ. ಬಡವರಿಗೆ ಅತ್ಯಂತ ಅಗತ್ಯವಾದ ಉಪ್ಪಿನ ಬೆಲೆಯೂ ಅತಿ ಹೆಚ್ಚಾಗಿದೆ. ಪರಿಸ್ಥಿತಿ ಹೀಗಿರುವಾಗ ಸ್ಲಂಗಳು ಹೆಚ್ಚಾಗುವುದರಲ್ಲಿ ಆಶ್ಚರ್ಯವಿಲ್ಲ. ಸ್ಲಂಗಳು ಯಾವುದೇ ದೇಶದ ಆರ್ಥಿಕ, ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿಯ ವಿಫಲತೆಯ ಸಂಕೇತಗಳಾಗಿವೆ.

ಸ್ಲಂ ಡಾಗ್ ಮಿಲಿಯನೇರ್‌ನಂಥ ಒಂದು ಸಂಗತಿ ಸ್ವಲ್ಪ ವಿಭಿನ್ನವಾಗಿ ೧೯೨೭ರಲ್ಲಿ ನಡೆಯಿತು. ಆಗ ಅಮೇರಿಕದ ಓರ್ವ ಪತ್ರಿಕೋದ್ಯಮಿ ಮಹಿಳೆ ಮಿಸ್ ಮೆಯೊ ಭಾರತಕ್ಕೆ ಬಂದು ಇಲ್ಲಿಯ ಬಡತನ, ಅಶುಚಿತ್ವ ಇತ್ಯಾದಿಗಳನ್ನು ನೋಡಿ 'ಮದರ್ ಇಂಡಿಯಾ' ಎಂಬ ಪುಸ್ತಕ ಪ್ರಕಟಿಸಿದಳು. ಆ ಪುಸ್ತಕ ಭಾರತದ ಅನೇಕ ಒಳ್ಳೆಯ ನೈಜ ಸಂಗತಿಗಳನ್ನು ಬಹು ಜಾಣತನದಿಂದ ಬಚ್ಚಿಟ್ಟು ಕೇವಲ ಕೀಳು ಸಂಗತಿಗಳನ್ನು ಬಹು ಪರಿಣಾಮಕಾರಿಯಾಗಿ ಬೆಳಕಿಗೆ ತರಲು ಪ್ರಯತ್ನಿಸಿತ್ತು. ಆ ಪುಸ್ತಕ ಗಾಂಧೀಜಿಯವರ ಕೈ ತಲುಪಿತು. ಆ ಪುಸ್ತಕದ ಬಗ್ಗೆ ಅಭಿಪ್ರಾಯ ತಿಳಿಸಲು ಗಾಂಧೀಜಿಯವರನ್ನು ಕೋರಲಾಯಿತು. ಆಗ ಗಾಂಧೀಜಿ ಹೇಳಿದ್ದು, "ಈ ಪುಸ್ತಕ ಬುದ್ಧಿವಂತಿಕೆಯಿಂದಲೂ, ಪರಿಣಾಮಕಾರಿಯಾಗಿಯೂ ಬರೆಯಲ್ಪಟ್ಟಿದೆ. ಎಚ್ಚರಿಕೆಯಿಂದ ಉಪಯೋಗಿಸಲಾದ ಕೊಟೇಶನ್‌ಗಳು ಈ ಪುಸ್ತಕ ಸತ್ಯವನ್ನು ಎತ್ತಿಹಿಡಿಯುತ್ತದೆಂದೆನಿಸುವಂತೆ ಮಾಡುತ್ತವೆ. ಆದರೆ ದೇಶದ ಚರಂಡಿಗಳ ಮುಚ್ಚಳವನ್ನು ತೆಗೆಯುವ ಏಕೈಕ ಉದ್ದೇಶ್ಯದಿಂದ ಬಂದ ಚರಂಡಿ ಪರೀಕ್ಷಕನ

ವರದಿಯಂತೆ ಈ ಪುಸ್ತಕ ನನಗೆ ಭಾಸವಾಗುತ್ತದೆ." ಈ ಪುಸ್ತಕ ಕುರಿತಾಗಿಯೇ ಸುಮಾರು ಹನ್ನೆರಡು ಪುಟಗಳಷ್ಟು ಲೇಖನವನ್ನು ಬರೆದು ಎಲ್ಲ ರೀತಿಯಲ್ಲೂ ಟೀಕಿಸಿದ್ದಾರೆ. ಅಂಥದೇ ಚರಂಡಿ ಪರೀಕ್ಷಕನ ವರದಿಯಂತಿರುವ ಸ್ಲಂ ಡಾಗ್ ಮಿಲಿಯನೇರ್ ಚಲನಚಿತ್ರವನ್ನು ಇಂದಿನ ಭಾರತೀಯರು ಹಾಡಿ ಹೊಗಳಿದ್ದಾರೆ. ಭಾರತದ ಬಗ್ಗೆ ಗಾಂಧೀಜಿ ಹೊಂದಿದ್ದ ಅಪ್ರತಿಮ ಅಭಿಮಾನವೆಲ್ಲಿ, ಇಂದಿನ ಭಾರತೀಯರ ಅಭಿಮಾನಶೂನ್ಯತೆಯೆಲ್ಲಿ. ಇನ್ನೊಂದು ಹೋಲಿಕೆ ಇಲ್ಲಿದೆ. 'ಮದರ್ ಇಂಡಿಯಾ' ಬರೆದವಳು ಪಾಶ್ಚಿಮಾತ್ಯಳು. ಸ್ಲಂ ಡಾಗ್ ಚಲನಚಿತ್ರ ತೆಗೆದವನೂ ಪಾಶ್ಚಿಮಾತ್ಯ. ಅಂದರೆ ನಮ್ಮ ಭಾರತೀಯರಿಗೆ ಪಶ್ಚಿಮದಿಂದ ಬರುವ ಎಂಥ ವಿಷಯವೇ ಆಗಿರಲಿ ಅದು ಅಪ್ಯಾಯಮಾನವಾಗಿಬಿಡುತ್ತದೆ. ಅಂದರೆ ಸ್ವಾತಂತ್ರ್ಯ ಬಂದು ೬೩ ವರ್ಷಗಳಾಗಿದ್ದರೂ ಭಾರತೀಯರ ಆ ದಾಸ್ಯ ಮನೋಭಾವನೆ ಕಿಂಚಿತ್ತೂ ಬದಲಾವಣೆಯಾಗಿಲ್ಲ. ಆದ್ದರಿಂದಲೇ ಭಾರತ ಇಂದೂ ಆರ್ಥಿಕವಾಗಿ, ನೈತಿಕವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ತನ್ನ ಅಸ್ಮಿತೆಯನ್ನು ಕಳೆದುಕೊಂಡು ಅಶರೀರ ಆತ್ಮದಂತೆ ಅಂತರಿಕ್ಷದಲ್ಲಿ ತ್ರಿಶಂಕು ಸ್ಥಿತಿಯಲ್ಲಿದೆ. ಸ್ಲಂ ಡಾಗ್ ಚಿತ್ರವನ್ನು ನೋಡಿದ ಸ್ಲಂ ನಿವಾಸಿಗಳೇ ಅದನ್ನು ಅವಾಸ್ತವಿಕ ಎಂದು ಹೇಳಿದ್ದಾರೆ. ಸ್ಲಂನಲ್ಲಿರುವ ಜನ ಎಲ್ಲ ಬಗೆಯ ತೊಡಕುಗಳ ಮಧ್ಯೆಯೂ ಎಂಥೆಂಥ ಔದ್ಯಮಿಕ ಸಾಹಸಗಳನ್ನು ಮಾಡುತ್ತಿದ್ದಾರೆ, ಗೌರವ ಜೀವನವನ್ನು ನಡೆಸುತ್ತಿದ್ದಾರೆ ಎಂಬ ಸಂಗತಿ ಸ್ಲಂ ಡಾಗ್ ಚಿತ್ರ ತೆಗೆದವರಿಗೆ ಗೊತ್ತಾಗದೇ ಇರುವುದು ವಿಷಾದನೀಯ ಎಂದೂ ಹೇಳಿದ್ದಾರೆ. ಇದಕ್ಕೆ ಕಾರಣ ಪಾಶ್ಚಿಮಾತ್ಯರ ದೃಷ್ಟಿಯಲ್ಲಿ ಭಾರತ ಯಾವಗಲೂ ಹಿಂದೆ ಉಳಿದಿರುವ, ಅನಾಗರಿಕ ಮತ್ತು ಶೋಷಣೆಗೆ ಒಳಗಾಗಬಲ್ಲ ದೇಶವಾಗಿದೆ. ಈ ಮಾತನ್ನು ಸಿದ್ಧಪಡಿಸುವಂತೆ ನಮ್ಮ ಭಾರತೀಯರು ಸ್ಲಂ ಡಾಗ್‌ನಂಥ ಚಿತ್ರಕ್ಕೆ ಮಾರುಹೋಗುತ್ತಾರೆ. ಭಾರತೀಯರು ಇನ್ನೂ ತಮ್ಮ ನಿಜ ಸ್ವಾತಂತ್ರ್ಯದ ಅರ್ಥವನ್ನು ತಿಳಿಯಲು ಪ್ರಯತ್ನಿಸಿಲ್ಲ. ಈಗ ಹದಿನೈದನೇ ಲೋಕಸಭೆಗಾಗಿ ಮತ್ತು ಕೆಲ ರಾಜ್ಯಗಳ ವಿಧಾನ ಸಭೆಗಳಿಗಾಗಿ ನಡೆಯುತ್ತಿರುವ ರಾಜಕೀಯ ಪಕ್ಷಗಳ ಮೇಲಾಟವನ್ನು ನೋಡಿದರೆ ಭಾರತ ನಿಜ ಸ್ವಾತಂತ್ರ್ಯದಿಂದ ಇನ್ನೂ ದೂರ ಹೋಗುತ್ತಿದೆಯೆಂದು ಅನಿಸುತ್ತದೆ. ಈ ಸಂದರ್ಭದಲ್ಲಿ ಗಾಂಧೀಜಿಯವರು ೧೯೧೬ ರಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದ ಉಧ್ಘಾಟನೆಯ ಸಂದರ್ಭದಲ್ಲಿ ಹೇಳಿದ ಮಾತು ಜ್ಞಾಪಕಕ್ಕೆ ಬರುತ್ತದೆ. ಏಕೆಂದರೆ ೧೯೪೭ರ ಪೂರ್ವದಲ್ಲಿ ಇಂಗ್ಲಿಷರು ಯಾವ ರೀತಿಯಲ್ಲಿ, ಯಾವ ಬಗೆಯಲ್ಲಿ ಭಾರತವನ್ನೂ, ಭಾರತೀಯರನ್ನೂ ಶೋಷಣೆ ಮಾಡಿದರೋ, ತುಳಿದರೋ ಅದೇ ರೀತಿ ಈಗ ಸ್ವಾತಂತ್ರ್ಯ ನಂತರ ಇಂಗ್ಲಿಷರ ವಿಚಾರ, ಶಿಕ್ಷಣ, ಸಂಸ್ಕೃತಿ ಇತ್ಯಾದಿಗಳಿಂದ ಪ್ರಾಭಾವಿತರಾದ ಪಾಶ್ಚಿಮಾತ್ಯೀಕರಣಗೊಂಡ ಭಾರತೀಯರಿಂದಲೇ ಭಾರತದ ಮತ್ತು ಭಾರತೀಯರ ಶೋಷಣೆ ಆಗುತ್ತಿದೆ ಮತ್ತು ಅವರು ಭಾರತೀಯರನ್ನು ತುಳಿಯುತ್ತಿದ್ದಾರೆ. ಒಂದರ್ಥದಲ್ಲಿ ಭಾರತ ಒಡೆದು ಹೋಗಿದೆ. ಪಾಶ್ಚಿಮಾತ್ಯೀಕರಣಗೊಂಡ ಭಾರತೀಯರ ಭಾರತ ಒಂದಾದರೆ, ಇನ್ನುಳಿದ ಭಾರತೀಯರ ಭಾರತ ಇನ್ನೊಂದು. ಇಡೀ ಭಾರತಕ್ಕೆ ಪಾಶ್ಚಿಮಾತ್ಯೀಕರಣದಿಂದ

ವಿಮೋಚನೆ ಸಿಗಬೇಕೆಂಬುದೇ ಗಾಂಧೀಜಿಯವರ ಹೆಬ್ಬಯಕೆ ಆಗಿತ್ತು. ಆದ್ದರಿಂದ ೧೯೩೩ರ ಗಾಂಧೀಜಿಯವರ ಮಾತು ಈ ವಿಷಮ ಸಂದರ್ಭದಲ್ಲಿ ಜ್ಞಾಪಕಕ್ಕೆ ಬರುತ್ತದೆ. ಅವರ ಹೇಳಿಕೆ ಏನೆಂದರೆ, "ಭಾರತದ ವಿಮೋಚನೆಯಾಗಬೇಕಾದರೆ ಇಂಗ್ಲಿಷರು ನಿವೃತ್ತರಾಗಬೇಕು, ಅವರನ್ನು ಹೊರಗೆ ತಳ್ಳಿಹಾಕಬೇಕು, ಅವರು ಹೊರಟು ಹೋಗಲೇಬೇಕೆಂದು ಹೇಳುವುದಕ್ಕೆ ನಾನು ಸಂಕೋಚಪಡುವುದಿಲ್ಲ, ಈ ನನ್ನ ನಂಬಿಕೆಯ ಸಮರ್ಥನೆಗಾಗಿ ಪ್ರಾಣ ಬಿಡಲೂ ಸಿದ್ಧ."

ಇಲ್ಲಿ ನಾವು ಗಮನಿಸಬೇಕಾದ್ದು ಇಂಗ್ಲಿಷರು ಅಂದರೆ ಅವರ ರೀತಿ–ನೀತಿ–ಸಂಸ್ಕೃತಿ–ವಿಚಾರ ಇತ್ಯಾದಿಗಳು. ಇಂಗ್ಲಿಷರು ಹೋಗಬೇಕೆಂದರೆ ಇಂಗ್ಲಿಷರ ಆ ರೀತಿ–ನೀತಿಗಳಿಂದ, ಇಂಗ್ಲಿಷ್ ಮನೋದೃಷ್ಟಿಯಿಂದ ಬಿಡುಗಡೆ ಹೊಂದುವುದು. ಹಾಗೆ ಆದಾಗ ಮಾತ್ರ "ಮದರ್ ಇಂಡಿಯಾ", "ಸ್ಲಂ ಡಾಗ್ ಮಿಲಿಯನೇರ್" ಎಂಬಂಥ ಪುಸ್ತಕ ಬರೆಯುವ, ಚಲನಚಿತ್ರ ತಯಾರಿಸುವ ಪಾಶ್ಚಿಮಾತ್ಯರ ಹುಚ್ಚುತನಕ್ಕೆ ಕಡಿವಾಣಹಾಕಬಹುದು. ಇಲ್ಲವಾದರೆ ಸ್ವತಂತ್ರ ಭಾರತ ಇನ್ನು ಮುಂದೆಯೂ ಒಂದಲ್ಲ ಒಂದು ಅರ್ಥದಲ್ಲಿ; ಒಂದಿಲ್ಲ ಒಂದು ರಾಷ್ಟ್ರ ಶಕ್ತಿಗೆ 'ಅಂಡರ್ ಡಾಗ್' ಆಗಿಯೇ ಉಳಿಯ ಬೇಕಾದೀತು.

* * *

ಪುಸ್ತಕ ಪರಿಚಯ

ಪುಸ್ತಕದ ಹೆಸರು	:	**ಕೆ.ಪಿ.ಸುರೇಶ್ ಪದ್ಯಗಳು**
ಲೇಖಕರ ಹೆಸರು	:	ಕೆ.ಪಿ.ಸುರೇಶ್
ಪ್ರಕಾಶಕರು	:	ಒನ್‌ವ್ಹೀಲರ್ ಪಬ್ಲಿಕೇಷನ್ಸ್ ವೆಂಕಟಾಲ ಚರ್ಚ್‌ಗೇಟ್ ಸ್ಟೇಷನ್, ಯಲಹಂಕ ಅಂಚೆ, ಬೆಂಗಳೂರು–೬೪
ಬೆಲೆ : ೬೫ ರೂ/–	:	ಪುಟಗಳು ೮+೬೨ +೭೦

ಕನ್ನಡ ಕವಿತಾ ಪ್ರಪಂಚದಲ್ಲಿ ಇತ್ತೀಚಿಗಿನ ಉದಯೋನ್ಮುಖ ಕವಿಗಳಲ್ಲಿ ಕೆ.ಪಿ.ಸುರೇಶ್ ಒಬ್ಬರು. ಪ್ರಸ್ತುತ ಪುಸ್ತಕ ಸುರೇಶ್‌ರವರ ತುಂಬ ಇತ್ತೀಚಿನ ಕವನ ಸಂಕಲನ. ಅವರ ಮೊದಲನೆಯ ಕವನ ಸಂಕಲನ 'ದಡ ಬಿಟ್ಟ ದೋಣಿ' ಈಗಾಗಲೆ ಸುರೇಶ್‌ರವರಿಗೆ ಜನಪ್ರಿಯತೆಯನ್ನು ತಂದು ಕೊಟ್ಟಿದೆ ಮತ್ತು ಆ ಪುಸ್ತಕಕ್ಕೆ ಮುದ್ದಣ ಕಾವ್ಯ ಪ್ರಶಸ್ತಿಯೂ ದೊರಕಿದೆ. ಪ್ರಸ್ತುತ ಸಂಕಲನವು ಮೂವತ್ತೊಂದು ಕವಿತೆಗಳನ್ನು ಒಳಗೊಂಡಿದೆ. ಈ ಕವಿತೆಗಳಲ್ಲಿ ಪ್ರತಿಯೊಂದೂ ನಮ್ಮ ಸುತ್ತಮುತ್ತಲಿರುವ ಸಾಮಾನ್ಯ ಪ್ರಾಣಿ ಪಕ್ಷಿಗಳ ಕುರಿತಾಗಿ ಇವೆ. ಆದರೆ ಪ್ರಾಣಿಗಳನ್ನು ನೋಡುವ ದೃಷ್ಟಿಯಲ್ಲಿ

೨೯ ನೇಪುಟ ನೋಡಿ . . .

ಟಿಬೆಟ್: ಒಂದು ದುಃಖಾಂತವೇ?

– *ಮಂಗ್ಳೂರ ವಿಜಯ*

ಚೀನಾದ ಮೊದಲ ಸೇನಾ ತುಕಡಿಯು ಟಿಬೆಟ್ ಮೇಲೆ ಆಕ್ರಮಣಕ್ಕೆ ಪ್ರಾರಂಭಿಸಿದ ಕಾಲದಿಂದ, ಟಿಬೆಟನ್ನರು ದೇಶ ತೊರೆದು ಬರುವ ಪ್ರಕ್ರಿಯೆ ಶುರುವಾಯಿತು. ಅದು ಈ ಹೊತ್ತಿನವರೆಗೂ ಮುಂದುವರೆದಿದೆ. ಚೀನಿ ಆಡಳಿತವನ್ನು ಎದುರಿಸಿ ಈವರೆಗೆ ಸುಮಾರು ೧೨,೫೦,೦೦೦ ಟಿಬೆಟನ್ನರು ಪ್ರಾನಾರ್ಪಣೆ ಮಾಡಿದ್ದಾರೆ. ಸುಮಾರು ೧,೨೦,೦೦೦ ಟಿಬೆಟನ್ನರು ದೇಶ ತೊರೆದು ಬಂದಿದ್ದಾರೆ. ಈ ಪೈಕಿ ಸುಮಾರು ೧,೦೦,೦೦೦ ಜನರು ಭಾರತದಲ್ಲಿ ಆಶ್ರಯ ಪಡೆದಿದ್ದಾರೆ, ನೇಪಾಳದಲ್ಲಿ ಸುಮಾರು ೬,೦೦೦ ಭೂತಾನ್ನಲ್ಲಿ ಸುಮಾರು ೧,೫೦೦ ಸ್ವಿಜರ್ಲೆಂಡ್ನಲ್ಲಿ ಸುಮಾರು ೨೦೦೦ ಅಮೆರಿಕಾ, ಬ್ರಿಟನ್ ಮುಂತಾದೆಡೆ ಇನ್ನೂ ಸುಮಾರು ೧೦,೦೦೦ ಟಿಬೆಟನ್ನರು ಆಶ್ರಯ ಪಡೆದಿದ್ದಾರೆ.

ಚೀನಿ ಆಡಳಿತದ ಕಣ್ಣು ತಪ್ಪಿಸಿ, ಪ್ರಕೃತಿಯ ವಿಕೋಪ ಎದುರಿಸಿ, ಮಿತಿಯಿಲ್ಲದ ಮಾನಸಿಕ–ದೈಹಿಕ ಯಾತನೆ ಅನುಭವಿಸಿ, ದೇಶ ತೊರೆದು ಬರುವ ಟಿಬೆಟನ್ನರ ಗುರಿ ಭಾರತ ತಲುಪುವುದೇ ಆಗಿರುತ್ತದೆ. ಭಾರತ ಪ್ರದೇಶಕ್ಕೆ ಹಲವು ದಾರಿಗಳಿದ್ದರೂ, ನೇಪಾಳ ಮೂಲಕಬರುವುದು ಹತ್ತಿರವಾದರೂ ಈಚೆಗೆ ಬಹುತೇಕ ಟಿಬೆಟನ್ನರು ಭಾರತಕ್ಕೆ ಬರಲು ಬಳಸುವುದು ಕಾಂಗ್ರಾ ಕಣಿವೆ ದಾಟುವ ಮಾರ್ಗವನ್ನು. ಈಶಾನ್ಯ ಭಾರತದ ಗಡಿ ಟಿಬೆಟನ್ನರನ್ನು ಸೆಳೆಯುವುದು ತೀರಾ ಕಮ್ಮಿ, ಹತ್ತರದ ದಾರುಯಾದ ನೇಪಾಳ ಮಾರ್ಗ ಹಿಡಿದೇ ಬಹುತೇಕ ಟಿಬೆಟನ್ನರು ಭಾರತ ತಲುಪುತ್ತಿದ್ದರು. ಈಚೆಗೆ ಈ ಮಾರ್ಗದಲ್ಲಿ ಹೊಸ ಅಪಾಯ ಕಾಣಿಸಿತು. ನೇಪಾಳ ಬಿಗಿ ನಿಲುವು ತಾಳಿ, ಗಡಿ ದಾಟುವಾಗ ಸಿಕ್ಕಿಬಿದ್ದ ೧೮೩ ಜನ ಟಿಬೆಟನ್ನರನ್ನು ೧೯೯೦ರಲ್ಲಿ ಚೀನಿ ಆಡಳಿತಕ್ಕೆ ಹಿಂತಿರುಗಿಸುವ ಕ್ರಮ ಕೈಗೊಂಡಿತು. ಹಾಗಾಗಿ ಈಚೇಗೆ ಕಾಂಗ್ರಾ ಕಣಿವೆ ಮಾರ್ಗ ಬಲು ಘೋರವಾಗಿದ್ದರೂ, ಟಿಬೆಟನ್ನರು ಅದನ್ನೆ ಬಳಸುತ್ತಿದ್ದಾರೆ.

ಟಿಬೆಟನ್ನರು ಈ ಮಾರ್ಗ ಆಶ್ರಯಿಸಲು ಇನ್ನೂ ಬಲವಾದ ಕಾರಣವೊಂದಿದೆ. ಟಿಬೆಟನ್ನರ ಪರಮದೈವ ದಲೈ ಲಾಮರ ಅಧಿಕೃತನಿವಾಸ ಇರುವುದು ಹಿಮಾಚಲ ಪ್ರದೇಶದ ಧರ್ಮಶಾಲಾದಲ್ಲಿ. ಗಡಿಪಾರಾದ ಟಿಬೆಟ್ ಸರ್ಕಾರ ಪ್ರಧಾನ ನೆಲೆ ಹೊಂದಿರುವುದೂ ಇಲ್ಲೇ. ಹಾಗಾಗಿ ಈ ಮಾರ್ಗದ ಮೂಲಕ ಭಾರತ ಪ್ರವೇಶಿಸುವ ಟಿಬೆಟನ್ನರ ಮೊದಲ ಕಾರ್ಯವೆಂದರೆ ಪರಮಪೂಜ್ಯ ದಲೈ ಲಾಮರ ದರ್ಶನ ನಡೆಯುವುದು.

ಹೀಗೆ ಬಂದ ಟಿಬೆಟನ್ನರನ್ನು ಮ್ಯಾಕ್‌ಲಿಡ್‌ಗಂಜ್‌ನಲ್ಲಿ ಸಂಪೂರ್ಣ ಆರೋಗ್ಯ ತಪಾಸಣೆ ಮಾಡಲಾಗುತ್ತದೆ. ಅಲ್ಲಿನ ತುರ್ತು ತಂಗುದಾಣದಲ್ಲಿ ೧೫ ದಿನಗಳವರೆಗೆ ಉಚಿತವಾಗಿ ಉಳಿದುಕೊಳ್ಳಲು ಅವಕಾಶವಿದೆ. ನಂತರ ಅವರ ಆದ್ಯತೆ ಹಾಗೂ ಗಡಿಪಾರಾಗಿರುವ ಸರ್ಕಾರದಲ್ಲಿರುವ ಅವಕಾಶಗಳಿಗೆ ಅನುಗುಣವಾಗಿ ಅವರನ್ನು

ಯಾವುದಾದರೊಂದು ಟಿಬೆಟನ್ ನೆಲೆಯಲ್ಲಿ ಉಳಿಸಲಾಗುತ್ತದೆ.

ದೇಶ ತೊರೆದು ಬಂದವರೊಂದಿಗೆ ಅಧಿಕೃತ ಚರ್ಚೆ ನಡೆಸಿ, ಟಿಬೆಟ್‌ನಲ್ಲಿ ನಡೆದ ಇತ್ತೀಚೆಗಿನ ಬೆಳವಣಿಗೆಗಳನ್ನು ತಿಳಿದುಕೊಳ್ಳಲಾಗುವುದು. ಭಾರತ ಮತ್ತು ಇತರ ದೇಶಗಳಲ್ಲಿ ನೆಲೆಸಿರುವ ಟಿಬೆಟನ್ನರ ಬಗ್ಗೆ, ಈ ಹೊಸಬರಿಗೆ ಮಾಹಿತಿ ನೀಡಲಾಗುವುದು. ದಲೈ ಲಾಮಾ ಟಿಬೆಟ್ ತೊರೆದು ಬಂದ ಬಳಿಕ ಟಿಬೆಟ್ನಲ್ಲಿ ಹುಟ್ಟಿದ ಅನೇಕರು, ದಲೈ ಲಾಮಾರ ಬಗ್ಗೆ ಕೇಳಿ ಮಾತ್ರ ಬಲ್ಲರು. ಎಷ್ಟೋ ಯುವಜನರು "ನಮ್ಮ ತಂದೆ-ತಾಯಿ ಮತ್ತಿತರರು ನಮಗೆ ಪರಮಪೂಜ್ಯರ ಬಗ್ಗೆ ಹೇಳುತ್ತಿದ್ದುದನ್ನು ಕೇಳಿದಾಗ, ಅಂಥವರೊಬ್ಬರು ಈ ವಿಶ್ವದಲ್ಲಿ ಇರಲು ಸಾಧ್ಯವಿಲ್ಲವೆಂದೇ ನಾವು ತೀರ್ಮಾನಿಸಿದ್ದೆವು. ದಲೈ ಲಾಮಾ ಒಂದು ಕಾಲ್ಪನಿಕ ವ್ಯಕ್ತಿತ್ವ ಎಂಬುದೇ ನಮ್ಮ ತಿಳುವಳಿಕೆಯಾಗಿತ್ತು..." ಎಂದು ಹೇಳಿದ್ದೂ ಉಂಟು.

ದೇಶ ತೊರೆದು ಬಂದ ಟಿಬೆಟನ್ನರ ಧರ್ಮಶಾಲಾ ತಲುಪಿದಾಗ, ದಲೈ ಲಾಮಾ ಅಲ್ಲಿದ್ದರೆ, ಅವರ ಭೇಟಿ ಮಾಡಿ, ಅವರ ಆಶೀರ್ವಾದ ಕೋರುವರು. ದಲೈ ಲಾಮಾ ಇಲ್ಲದೇ ಹೋದರೆ, ಸರ್ಕಾರದ ಪ್ರತಿನಿಧಿಗಳನ್ನು ಅವರು ಭೇಟಿಯಾಗುವರು. ಆಗೆಲ್ಲ ಅವರ ಕಣ್ಣುಗಳಲ್ಲಿ ಧಾರಾಕಾರವಾಗಿ ಕಣ್ಣೀರು ಸುರಿಯುವುದು. ಅದು ದುಃಖಾಶ್ರುವೂ ಹೌದು, ಆನಂದ ಬಾಷ್ಪವೂ ಹೌದು. ದೇಶ ಬಿಟ್ಟು ತಮ್ಮವರನ್ನು ತೊರೆದು ಬಂದದ್ದಕ್ಕೆ ಅವರಿಗೆ ದುಃಖ; ಚೀನಿ ಆಡಳಿತದ ದಮನದಿಂದ ಪಾರಾಗಿದ್ದಕ್ಕೆ ಹಾಗೂ ಪರಮಪೂಜ್ಯರನ್ನು ದರ್ಶನ ಮಾಡಿದ್ದಕ್ಕೆ ಆನಂದ. ಮನಸ್ಸು ಹಗುರವಾಗಿ ಅವರು ಪರಿಸ್ಥಿತಿಗೆ ಹೊಂದಿಕೊಳ್ಳಲು ಕೆಲವೊಮ್ಮೆ ವಾರಗಳೇ ಹಿಡಿಯುವುದುಂಟು.

ದೇಶ ಬಿಟ್ಟು ಬಂದ ಟಿಬೆಟನ್ನರು ತಿವ್ರ ಸಂಕಟದ ಸ್ಥಿತಿಯಲ್ಲಿದ್ದಾರೆ. ಯುವಜನರ ಸಮಸ್ಯೆ ಇನ್ನೂ ಗಂಭೀರವಾದುದು. ಅವರಿಗೆ ಉನ್ನತ ಶಿಕ್ಷಣ ಪಡೆಯಲು ಅವಕಾಶಗಳು ಕಡಿಮೆ. ಉದ್ಯೋಗಾವಕಾಶಗಳು ಇನ್ನೂ ಕಡಿಮೆ. ವಿದ್ಯಾವಂತರಾದವರು ಕೃಷಿಯಲ್ಲಿ ತೊಡಗಲು, ಸ್ವೆಟರ್ ಮಾರಾಟ ಮಾಡಲು, ನೇಯ್ಗೆ ಕೆಲಸದಲ್ಲಿ ತೊಡಗಲು ಮುಂದೆ ಬರುವುದು ಅಪರೂಪ. ಹಗಾಗಿ ವಿದ್ಯಾವಂತ ಟಿಬೆಟನ್ ಯುವಜನರಲ್ಲಿ ಹೆಚ್ಚು ನಿರಾಶೆ ಮೂಡುತ್ತಿದೆ.

ಈ ಯುವಜನರು ಟಿಬೆಟ್ ಹೊರಗೆ ಜನಿಸಿದವರು. ಟಿಬೆಟ್ ಸಮಸ್ಯೆಯ ಬಿಸಿ ಇವರ ತಂದೆ-ತಾಯಿಗಳಿಗೆ, ಹಿರಿಯರಿಗೆ ತಾಕಿದಷ್ಟು ತೀವ್ರವಾಗಿ ಇವರಿಗೆ ತಟ್ಟುವುದು ಅಪರೂಪ. ಟಿಬೆಟನ್ ಸಂಸ್ಕೃತಿ ಬಗೆಗಿನ ಅಭಿಮಾನ ಇವರಲ್ಲಿ ತೀವ್ರವಾಗೇನೂ ಇಲ್ಲ. ಇದಕ್ಕೆ ತಲೆಮಾರಿನ ಅಂತರ ಕಾರಣವಿರಲೂಬಹುದು. ಜೀನ್ಸ್ ಪ್ಯಾಂಟು, ಷರ್ಟು, ಪಾಪ್ ಸಂಗೀತ, ಫಾಸ್ಟ್ ಫುಡ್.... ಸಂಸ್ಕೃತಿಗೆ ಇವರು ಮಾರು ಹೋಗುತ್ತಿದ್ದಾರೆ. ಈ ಯುವಜನರು ಟಿಬೆಟನ್ ಸಂಸ್ಕೃತಿಯ ಅನನ್ಯತೆಯನ್ನು ಮನಗಾಣುವಂತೆ ಮಾಡುವುದೇ ಇಂದು ಟಿಬೆಟ್‌ನ ಸಮಾಜದ ಮುಂದಿರುವ ಬಹು ಮಹತ್ವದ ಸವಾಲು. "ಸುಖಿಗಳಾಗಿ ಬದುಕುವ ಕಲೆ ಇತರರೂ ಸುಖಿಗಳಾಗಿರುವಂತೆ ನೋಡಿಕೊಳ್ಳುವ ಮನೋವೈಶಾಲ್ಯ ಹಾಗೂ ಕರುಣಾರ್ದ್ರತೆಗಳತ್ತ ನಮ್ಮ ಯುವಜನರನ್ನು ನಾವು ಸೆಳೆಯಬೇಕಾಗಿದೆ" ದಲೈ ಲಾಮಾರ ಸೋದರ ತೆಂಜಿನ್ ಜೋಗ್ಯಾಲ್ರ ಮಾರ್ಮಿಕವಾದ ಮಾತುಗಳಿವು.

"ಬರಲಿರುವ ದಿನಗಳಲ್ಲಿ ಮಾನವಿಯವಾಗಿ, ಅರ್ಥಪೂರ್ಣವಾಗಿ ಹಾಗೂ ಜವಾಬ್ದಾರಿಯುತವಾಗಿ ಜೀವನ ನಡೆಸುವಂತಾಗಲು ನಾವು ಟಿಬೆಟನ್ನರು ಸಿದ್ಧರಾಗಬೇಕು.

ಈ ಘಟ್ಟದಲ್ಲಿ ಟಿಬೆಟನ್ ಯುವಜನರು ಮುಂಚೂಣಿಗೆ ಬರಬೇಕು" ಎಂದ ದಲೈ ಲಾಮಾ ೧೯೯೦ರಲ್ಲೇ ಈ ದಿಕ್ಕಿನಲ್ಲಿ ಖಚಿತ ಹೆಜ್ಜೆ ಹಾಕಿದ್ದಾರೆ. ಭಾವೀ ಟಿಬೆಟನ್ ಸಮಾಜದಲ್ಲಿ ಪ್ರಜಾಪ್ರಭುತ್ವಕ್ಕೆ ಹಾಗೂ ಕಾಯ್ದೆಬದ್ಧ ಆಡಳಿತಕ್ಕೆ ಮನ್ನಣೆಯಿರಬೇಕೆಂದು ಅವರು ಸ್ಪಷ್ಟಪಡಿಸಿದ್ದಾರೆ. ಆ ವರ್ಷದ ಮೇ ತಿಂಗಳಲ್ಲಿ ಧರ್ಮಶಾಲೆಯಲ್ಲಿ ನಡೆದ ಸಮಾವೇಶಕ್ಕೆ ವಿಶ್ವದ ಎಲ್ಲಾ ಕಡೆಗಳಿಂದ ಸುಮಾರು ೪೦೦ ಜನ ಟಿಬೆಟನ್ ಪ್ರತಿನಿಧಿಳು ಬಂದಿದ್ದಾಗ ಅವರ ಸಮ್ಮುಖದಲ್ಲಿ, ಗಡಿಪಾರಾಗಿರುವ ಟಿಬೆಟ್ ಸರ್ಕಾರದ ಸಚಿವ ಸಂಪುಟ (ಕಶಾಗ್)ವನ್ನು ರಚಿಸಲಾಯಿತು. ಇದನ್ನು ರಚಿಸಿದ್ದು ದಲೈ ಲಾಮಾರಲ್ಲ; ೪೦೦ ಜನ ಪ್ರತಿನಿಧಿಗಳು.

ಈ ಸಮಾವೇಶದಲ್ಲೇ ದಲೈ ಲಾಮಾ "೧೯೬೩ರಲ್ಲಿ ರಚಿಸಲಾದ ಸಂವಿಧಾನದ ಹಲವು ಅಂಶಗಳು ಬದಲಾಗಬೇಕು. ಗಡೀಪಾರಾಗಿರುವ ಟಿಬೆಟ್‌ನ ಸರ್ಕಾರದ ಮುಖ್ಯಸ್ಥರಾಗಿ ನಾನು ಮುಂದುವರೆಯಲು ಇಚ್ಛಿಸುವುದಿಲ್ಲ. ದಲೈಲಾಮಾ ಟಿಬೆಟ್‌ನ ಸರ್ವೋಚ್ಚ ಆಡಳಿತಗಾರರೆಂಬ ನಂಬಿಕೆಯು ಪ್ರಜಾಪ್ರಭುತ್ವ ತತ್ವಕ್ಕೆ ಹೊಂದಿರುವುದಿಲ್ಲ. ಆದ್ದರಿಂದ ಈ ನಂಬಿಕೆಯನ್ನು ಟಿಬೆಟನ್ನರು ಬಿಡಬೇಕು. ಟಿಬೆಟ್ಗೆ ಸ್ವಾತಂತ್ರ್ಯ ಸಿಗುವವರೆಗೆ ಮಾತ್ರ ನಾನು ಟಿಬೆಟನ್ನರ ಹಿತಾಸಕ್ತಿಯನ್ನು ಪ್ರತಿನಿಧಿಸುವುದು. ನಂತರ ಕಶಾಗ್ ಎಲ್ಲಾ ಹೊಣೆ ಹೊತ್ತುಕೊಳ್ಳ ಬೇಕು ..." ಎಂದು ಹೇಳಿ, ಎಲ್ಲರ ಗಮನ ಸೆಳೆದರು.

ನೂರ ಹದಿನೈದು ಅನುಚ್ಛೇದನಗಳಿರುವ ಕರಡು ಸಂವಿಧಾನವು ಸಿದ್ಧಗೊಂಡಾಗ, ಅದರಲ್ಲಿನ ಒಂದು ಅನುಚ್ಛೇದ "ಜನತೆಯಿಂದ ಆಯ್ಕೆಯಾಗುವ ಒಟ್ಟು ಪ್ರತಿನಿಧಿಗಳ ಪೈಕಿ ಅರ್ಧಕ್ಕಿಂತ ಹೆಚ್ಚು ಜನರು ಮತ ಚಲಾಯಿಸುವ ಮೂಲಕ ದಲಾಯಿ ಲಾಮಾರನ್ನು ಬದಲಾಯಿಸಬಹುದು" ಎಂಬುದಿತ್ತು. ಸಂವಿಧಾನವನ್ನು ಚರ್ಚೆಗೆ ಎತ್ತಿಕೊಂಡ ಪ್ರತಿನಿಧಿಗಳು, ಈ ಅನುಚ್ಛೇದವನ್ನು ರದ್ದುಗೊಳಿಸಿದರು. ಆದರೆ ದಲೈ ಲಾಮಾ, ವಿಶೇಷ ಅನುಮತಿ ಪಡೆದು, ಪ್ರತಿನಿಧಿಗಳ ಸಭೆ ಉದ್ದೇಶಿಸಿ ಮಾತನಾಡಿ, ಆ ಅನುಚ್ಛೇದ ಮುಂದುವರೆಯಬೇಕೆಂದು ಆಗ್ರಹಪಡಿಸಿದರು. ಆಗ, ಒಲ್ಲದ ಮನಸ್ಸಿನಿಂದ ದಲೈ ಲಾಮಾರ ಆಗ್ರಹವನ್ನು ಪ್ರತಿನಿಧಿಗಳು ಮಾನ್ಯ ಮಾಡಿದರು.

ದಲೈ ಲಾಮಾ ತರಲು ಉದ್ದೇಶಿಸಿದ ಹೊಸ ಗಾಳಿಯು ಕೆಲವರಿಗೆ ಕಸಿವಿಸಿಯುಂಟು ಮಾಡಿತು. ತೀವ್ರವಾದಿಗಳಲ್ಲದ ಇವರು ನಿಧಾನವಾಗಿ ಹೆಜ್ಜೆ ಹಾಕುತ್ತಾ ಬದಲಾವಣೆಗಳನ್ನು ಒಂದೊಂದಾಗಿ ತರಬೇಕೆನ್ನುವವರು. ಹಾಗಾಗಿ ಇನ್ನು ಕೆಲವು ದಶಕಗಳವರೆಗಾದರೂ ದಲೈ ಲಾಮಾರೇ ಟಿಬೆಟನ್ನರನ್ನು ಮುನ್ನಡೆಸಬೇಕೆಂಬ ಹಂಬಲ ಇವರದು.

ಆದರೆ ಯುವ ಟಿಬೆಟನ್ನರ ದನಿ ಬೇರೆ. 'ದಲೈ ಲಾಮ ತರುತ್ತಿರುವ ಬದಲಾವಣೆಗಳು ಯಾತಕ್ಕೂ ಸಾಲದು. ಟಿಬೆಟನ್ ಸಮಾಜದಲ್ಲಿ ತೀವ್ರವಾದ ಬದಲಾವಣೆಗಳನ್ನು ಕ್ಷಿಪ್ರವಾಗಿ ತಂದು, ಟಿಬೆಟ್‌ನ ಸಮಾಜಕ್ಕೆ ಹಾಗೂ ವಿಶ್ವಕ್ಕೆ ಚುರುಕು ಮುಟ್ಟಿಸಬೇಕು' ಎನ್ನುವುದು ಈ ತೀವ್ರವಾದಿ ಯುವಜನರ ಆಗ್ರಹ. 'ಹೊಸ ಪಾದರಕ್ಷೆ ಧರಿಸಿ ಹಳೇ ಹಾದಿಯ ಮೇಲೆ ನಡೆಯುವುದೇಕೆ? ಹೊಸ ಹಾದಿಯನ್ನೇ ಹಿಡಿಯೋಣ' ಎಂಬ ಸಾಹಸವಾದಿ ನಿಲುವು ಇವರದು.

ತೀವ್ರಗಾಮಿಗಳೊಂದಿಗೆ ವಿಚಾರ ವಿನಿಮಯ ಮಾಡುವಂತೆಯೇ ಮಂದಗಾಮಿಗಳೊಂದಿಗೂ ದಲೈ ಲಾಮಾ ಚರ್ಚೆ ನಡೆಸುತ್ತಿದ್ದಾರೆ. ಒಟ್ಟಾರೆ,

ಪ್ರಜಾಪ್ರಭುತ್ವ ತತ್ವ ಅರ್ಥಪೂರ್ಣವಾಗಿ ಟಿಬೆಟನ್ ಸಮಾಜದಲ್ಲಿ ಅರಳಿ, ಜನದನಿಗೆ ಮುನ್ನಣೆ ಸಿಗುವಂತಾಗಬೇಕೆಂಬುದೇ ತಮ್ಮ ಆಪೇಕ್ಷೆ ಎಂದು ಅವರು ಉಭಯತ್ರರಿಗೂ ಸ್ಪಷ್ಟಪಡಿಸುತ್ತಿದ್ದಾರೆ.

ಕಳೆದ ಒಂದು ದಶಕದಿಂದಲೂ ವಿಶ್ವದಲ್ಲಿ ಹೊಸ ಗಾಳಿ ಅತಿ ರಭಸವಾಗಿ ಬೀಸುತ್ತಿದೆ. ವಿಶ್ವವು ಏಕಶಕ್ತಿ ಕೇಂದ್ರಕ್ಕೆ ಹೆಚ್ಚೂ ಕಮ್ಮಿ ಅಧೀನವಾಗಿ ಹೋಗುತ್ತಿದೆ. ಬಂಡವಾಳಶಾಹಿ ಎಂಬ ಚಂಡಮಾರುತದ ಅಡಿ ಕಮ್ಯುನಿಸ್ಟ್ ವ್ಯವಸ್ಥೆಯು, ಕೆಲವೆಡೆ ತರಗೆಲೆಗಳಂತೆ ಹಾಗೂ ಇನ್ನೂ ಕೆಲವೆಡೆ ನಿಧಾನವಾಗಿ, ಉರುಳಿ ಬಿದ್ದಿದೆ.

ಚೀನಾ ಕೂಡ ಕಳೆದ ಹತ್ತು ವರ್ಷಗಳಲ್ಲಿ ತನ್ನ ಕವಚವನ್ನು ತಾನೇ ಸಡಿಲಿಸಿಕೊಂಡಿದೆ. ಚೀನಾ ವಿಶ್ವದ ಭಾಗವಾಗೇ ಮುಂದುವರೆಯಬಯಸುವುದಾರೆ ಅದು ವಿಶ್ವದ ಮನ್ನಣೆಗೆ ಪಾತ್ರವಾಗುವುದು ಅನಿವಾರ್ಯವಾಗುತ್ತದೆ. ಟಿಬೆಟ್‌ನಲ್ಲಿ ತಾನು ವಾಸ್ತವವಾಗಿ ಮಾನವ ಹಕ್ಕುಗಳನ್ನು ದಮನ ಮಾಡಿದಾಗ್ಯೂ, "ಮಾನವ ಹಕ್ಕುಗಳಿಗೆ ಧಕ್ಕೆ ತರಬಾರದೆಂಬ ವಿಶ್ವದ ಆಪೇಕ್ಷೆಯನ್ನು ಗೌರವಿಸುವುದಾಗಿ" ಹೇಳುವುದು, ಚೀನಾಕ್ಕೆ ಅನಿವಾರ್ಯವಾಗಿದೆ.

ವಿಶ್ವ ಇಷ್ಟಕ್ಕೇ ಸುಮ್ಮನಾಗುವುದಿಲ್ಲ. ಚೀನಾದಲ್ಲಿ (ಟಿಬೆಟ್‌ನಲ್ಲಿ ಕೂಡ) ಮಾನವ ಹಕ್ಕುಗಳ ಸಂರಕ್ಷಣೆ ಎಷ್ಟರ ಮಟ್ಟಿಗೆ ಆಗುತ್ತಿದೆ ಎಂಬುದನ್ನು ತಿಳಿಯಲು ಇಚ್ಛಿಸುವ ವಿಶ್ವದ ಯಾವುದೇ ರಾಷ್ಟ್ರದ ಕೋರಿಕೆಯನ್ನು ತಳ್ಳಿಹಾಕುವ ಸ್ಥಿತಿಯಲ್ಲಿ ಇಂದು ಚೀನಾ ಇಲ್ಲ. ಇದಕ್ಕೆ ಸಾಕ್ಷ್ಯವೆಂದರೆ ಆಸ್ಟ್ರೇಲಿಯಾಕ್ಕೆ ನೀಡಿರುವ ಅವಕಾಶ. ಇಂಥ ಕೋರಿಕೆ ಮಂಡಿಸಿದ ಆಸ್ಟ್ರೇಲಿಯಾಕ್ಕೆ ಚೀನಾ ಅವಕಾಶ ನೀಡಬೇಕಾಯಿತು. ಆಸ್ಟ್ರೇಲಿಯಾದ ನಿಯೋಗ ಚೀನಾಕ್ಕೆ (ಟಿಬೆಟ್‌ಗೆ ಕೂಡ) ಭೇಟಿ ನೀಡಿತು. ಅನಂತರ ಇಂಥದೇ ಕೋರಿಕೆಯನ್ನು ಇಟಲಿ ಮಂಡಿಸಿದಾಗಲೂ ಚೀನಾ ಸಮ್ಮತಿಸಬೇಕಾಗಿ ಬಂತು.

ಚೀನಾದೊಳಗೂ ಕೂಡ ವಿಶೇಷ ದನಿ ಕೇಳಿಬರುತ್ತಿದೆ. ಪ್ರಜಾಪ್ರಭುತ್ವಕ್ಕಾಗಿ ಅಲ್ಲೂ ಆಗ್ರಹದ ದನಿ ಕೇಳಿಸಿದೆ. ಆ ದನಿಗೆ ಚೀನಾದೊಳಗೆ ಹಾಗೂ ಚೀನಾದ ಹೊರಗೆ ಸಹಾನುಭೂತಿ–ಬೆಂಬಲದ ಬೃಹತ್ ಅಲೆಯೇ ಕಾಣಿಸಿದೆ.

ಕಳೆದ ಒಂದು ದಶಕದಲ್ಲಿ ಚೀನಾ ತನ್ನ ಕಮ್ಯುನಿಸ್ಟ್ ವ್ಯವಸ್ಥೆಯಲ್ಲಿ ಹಲವಾರು ರಂಧ್ರಗಳನ್ನು ತಾನೇ ಕೊರೆದಿದೆ. ಪಾಶ್ಚಿಮಾತ್ಯ ಬಂಡವಾಳಶಾಹಿ ಅಲೆಯ ರಭಸಕ್ಕೆ ಬಹುಮಟ್ಟಿಗೆ ಅದು ತುತ್ತಾಗಿದೆ. ಹಾಂಗ್‌ಕಾಂಗ್ ಮತ್ತು ತೈವಾನ್ಗಳಿಗೆ ಸಂಬಂಧಿಸಿದಂತೆ ವೀನಾ ಬಹುಮಟ್ಟಿಗೆ ಮುಖಭಂಗ ಅನುಭವಿಸಿದೆ. ಪಶ್ಚಿಮದ ಬಂಡವಾಳಶಾಹಿ ನೀತಿ, ಪಶ್ಚಿಮದ ವಿಜ್ಞಾನ, ಪಶ್ಚಿಮದ ತಂತ್ರಜ್ಞಾನ... ಹೀಗೆ ಪಶ್ಚಿಮದ ಮೌಲ್ಯಗಳನ್ನು ತೋಳು ಚಾಚಿ ತಬ್ಬಿಕೊಳ್ಳುತ್ತಿರುವ ಚೀನಾ, ಪಶ್ಚಿಮದ ಮುಕ್ತತೆ, ಉದಾರತೆ, ಪ್ರಜಾಪ್ರಭುತ್ವ ವ್ಯವಸ್ಥೆಗಳಿಗೆ ಮಾತ್ರ ಮುಖ ತಿರುಗಿಸಿದರೆ ಚೀನಾಕ್ಕೆ ಅನಾಹುತ ಎದುರಾಗುವುದು ಶತಃಸಿದ್ಧ.

ಪಶ್ಚಿಮದ ಆರೋಗ್ಯವನ್ನೂ, ರೋಗಗಳನ್ನೂ ಒಟ್ಟಿಗೆ ತೆಗೆದುಕೊಳ್ಳುವ ಅರೆ ಅವಿವೇಕವನ್ನು ಏಷ್ಯಾದ ಇತರ ರಾಷ್ಟ್ರಗಳು ತೋರುತ್ತಿದ್ದರೆ, ಪಶ್ಚಿಮದ ಆರ್ಯೋಗ್ಯವನ್ನು ದೂರವಿಟ್ಟು, ಅಲ್ಲಿಂದ ರೋಗಗಳನ್ನಷ್ಟೇ ಸ್ವೀಕರಿಸಲು ಮುಂದಾಗುತ್ತಿರುವ ಚೀನಾ, ಸಂಪೂರ್ಣ ಅವಿವೇಕವನ್ನು ತೋರುತ್ತಿದೆ. * * *

ಕನ್ನಡ ಭಾಷೆಯ ಬೆಳವಣಿಗೆ : ಅಂದು, ಇಂದು ಮತ್ತು ನಾಳೆ

– ಡಾ. ಎಸ್.ವಿ ನರಸಿಂಹನ್

ದಕ್ಷಿಣದ ಕಾವೇರಿ ನದಿಯಿಂದ ಹಿಡಿದು ಉತ್ತರದ ಗೋದಾವರಿ ನದಿಯವರೆಗೆ ಹರಡಿದ್ದ ಕರ್ನಾಟಕ ದೇಶ, ವಸುಧೆಯಲ್ಲಿಯೇ ಅಂದರೆ ಈ ಭೂಮಿಯ ಮೇಲೇ ಒಂದು ವಿಶಿಷ್ಟ ಸ್ಥಾನವನ್ನು ಪಡೆದಿತ್ತು ಎಂದು ಕನ್ನಡದಲ್ಲಿ ನಮಗೆ ದೊರಕಿರುವ ಮೊಟ್ಟ ಮೊದಲ ಗ್ರಂಥವಾದ ಕವಿರಾಜಮಾರ್ಗದಲ್ಲಿ ತಿಳಿದು ಬರುತ್ತದೆ. ಕ್ರಿ.ಶ. ೮೧ಳ ಅಂದರೆ ಒಂಭತ್ತನೆ ಶತಮಾನದಲ್ಲಿ ರಾಷ್ಟ್ರಕೂಟ ಅರಸ ನೃಪತುಂಗ ಮಹಾರಾಜನ ಆಸ್ಥಾನ ಕವಿ ಶ್ರೀವಿಜಯ ಬರೆದಿರುವ ಈ ಗ್ರಂಥದಲ್ಲಿ ಕನ್ನಡ ನಾಡಿನ, ಕನ್ನಡಿಗರ, ಕನ್ನಡ ಭಾಷೆಯ ಬಗ್ಗೆ ಸವಿವರವಾದ ವರ್ಣನೆಯಿದೆ. ಕನ್ನಡಿಗರ ಬಗ್ಗೆ ಅವನಿಗೆ ಎಷ್ಟು ಅಭಿಮಾನ, ಹೆಮ್ಮೆ ಎಂದರೆ, ಮುಂದುವರಿದು ಆತ ಹೇಳುತ್ತಾನೆ:

"ಪದನರಿದು ನುಡಿಯಲುಂ ನುಡಿದುದನರಿದಾರಯಲುಂ ಆರ್ಪರಾ ನಾಡವರ್ಗಳ್।
ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್॥"

ಯಾವುದೇ ವಿಷಯವನ್ನೂ ವಿಶೇಷವಾಗಿ ಅಧ್ಯಯನ ಮಾಡದೇ ಚರ್ಚೆ ಮಾಡುವ ಸಾಮರ್ಥ್ಯ ಕನ್ನಡಿಗರಿಗಿದೆ ಎನ್ನುತ್ತಾನೆ. ೧೨೦೦ ವರ್ಷಗಳ ನಂತರವೂ ಈ ಅಭಿಮಾನ ಹಾಗೇ ಉಳಿದಿದೆ. ಏಕೆಂದರೆ, ಈವತ್ತು ಯಾವ ಕನ್ನಡದ ಕೃತಿಯನ್ನೂ ರಚಿಸದ, ಯಾವ ವಿಶೇಷ ಕನ್ನಡ ಪಾಂಡಿತ್ಯವನ್ನೂ ಪಡೆಯದ, ಸಾಮಾನ್ಯನಾದ ನನ್ನನ್ನು ಕನ್ನಡ ಭಾಷೆಯ ಬಗ್ಗೆ ಅಧಿಕೃತ ಉಪನ್ಯಾಸ ಮಾಡಲು ಕರೆಸಿರುತ್ತಾರೆ! ಈ ಕಾರ್ಯಕ್ಕೆ ನನ್ನನ್ನು ಮಾತ್ರವಲ್ಲ, ಇಲ್ಲಿ ಯಾರನ್ನಾದರೂ ಕರೆಸಬಹುದಿತ್ತು. ಯಾವ ಕನ್ನಡಿಗನೂ ಈ ಕೆಲಸವನ್ನು ಸಮರ್ಥವಾಗಿ ನಿಭಾಯಿಸಬಲ್ಲ ಎಂಬುದು ಅವರ ಧೃಢ ನಂಬಿಕೆ; ಅವರ ಅಭಿಮಾನ ಅಂಥದ್ದು!

ಕನ್ನಡದಲ್ಲಿ ದೊರಕಿರುವ ಗ್ರಂಥಗಳಲೆಲ್ಲ ಕವಿರಾಜಮಾರ್ಗವೇ ಮೊದಲಿನದು ಎಂದರೂ ಅದಕ್ಕಿಂತ ಮುಂಚೆ ಕ್ರಿ.ಶ. ೪೫೦ರಲ್ಲಿಯೇ ಬೇಲೂರಿನ ಹತ್ತಿರವಿರುವ ಹಲ್ಮಿಡಿ ಎಂಬಲ್ಲಿ ಒಂದು ಶಾಸನ ಸಿಕ್ಕಿದೆ. ಕದಂಬರ ದೊರೆ ಮಯೂರವರ್ಮ ಹಲ್ಮಿಡಿ ಎಂಬ ಗ್ರಾಮವನ್ನು ದತ್ತಿ ಕೊಟ್ಟ ವಿಚಾರ ಈ ಶಾಸನದಲ್ಲಿದೆ. ಅಂದರೆ, ಐದನೇ ಶತಮಾನದಲ್ಲಿ ಕನ್ನಡ ಬಳಕೆಯಲ್ಲಿತ್ತು. ಏನಿಲ್ಲವೆಂದರೂ ಅದಕ್ಕೂ ಸಾವಿರ ವರ್ಷಗಳ ಹಿಂದೆಯೇ ಕನ್ನಡ ಭಾಷೆ ಬಳಕೆಯಲ್ಲಿತ್ತು ಎಂದು ಊಹಿಸಬಹುದು.

ಯಾವುದೇ ಭಾಷೆಯನ್ನು ನಾವು ಕಲಿಯಬೇಕಾದರೂ ಮೊದಲಿಗೆ ಅದರ ವರ್ಣಮಾಲೆಯನ್ನು ಕಲಿಯುತ್ತೇವೆ. ಕನ್ನಡ ವರ್ಣಮಾಲೆಯಲ್ಲಿ ಒಟ್ಟು ಐವತ್ತು ಅಕ್ಷರಗಳಿವೆ. ಸ್ವರಗಳು ಅ ಆ ಇ ಈ ಉ ಊ ....ಒ ಓ ಔ ಹೀಗೆ ೧೬:

೧೪ + ಅನುಸ್ವರ (ಅಂ) ಮತ್ತು ವಿಸರ್ಗ(ಅಃ). ವ್ಯಂಜನಗಳು ಕ ಖ ಗ ಘ ಯಿಂದ ಪ ಫ ಬ ಭ ಮ ವರೆಗೆ ೨೫ + ಯ ರ ಲ ವ..........ಳ ವರೆಗೆ ೯. ಒಟ್ಟು ೩೪ . ಪ್ರತಿ ವ್ಯಂಜನವನ್ನು ಸ್ವರಗಳೊಂದಿಗೆ ಸೇರಿಸಿ ಕಾಗುಣಿತ, ಕ ಕಾ ಕಿ ಕೀ ತಯಾರಿಸಿಕೊಂಡಿದ್ದೇವೆ. ಈ ವ್ಯಂಜನಗಳಲ್ಲಿ ಮೊದಲಿಗೆ ೫ ಅಕ್ಷರಗಳ ಐದು ವರ್ಗಗಳನ್ನು ನೋಡುತ್ತೇವೆ. ಇವು ಕ ವರ್ಗ, ಚ ವರ್ಗ, ಟ ವರ್ಗ, ತ ವರ್ಗ ಮತ್ತು ಪ ವರ್ಗ. ಇವುಗಳಲ್ಲಿ ಒಂದೊಂದು ವರ್ಗದ ಉಚ್ಚಾರಣೆಯ ಧ್ವನಿಯೂ ನಮ್ಮ ನಾಲಿಗೆ, ಬಾಯಿ, ಒಸಡು ಮತ್ತು ತುಟಿಗಳ ನಡುವೆ ಚಲನೆಯನ್ನು ಆಧರಿಸಿದೆ. ಕ ಚ ಟ ತ ಪ ಎಂದು ಹೇಳುವಾಗ ನಮ್ಮ ನಾಲಿಗೆ ಮೇಲ್ದವಡೆಯ ಹಿಂದಿನಿಂದ ಮುಂದಕ್ಕೆ ಚಲಿಸುವುದನ್ನು ಗಮನಿಸಿ. ಕೊನೆಗೆ ಈ ಯಾವುದೇ ವರ್ಗಕ್ಕೂ ಸೇರದ ಅಕ್ಷರಗಳಾದ ಯ ರ ಲ ವ ಶ ಷ ಸ ಹ ಳ ಗಳನ್ನು ಸೇರಿಸಲಾಗಿದೆ. ಹೀಗೆ ಕನ್ನಡದ ಅಕ್ಷರಮಾಲೆಯನ್ನು ಸಂಪೂರ್ಣವಾಗಿ ವೈಜ್ಞಾನಿಕ ತಳಹದಿಯ ಮೇಲೆ ವಿನ್ಯಾಸಗೊಳಿಸಲಾಗಿದೆ. ಇದು ಇನ್ನಾವುದೇ ದೇಶದ ಭಾಷೆಯಲ್ಲಿಲ್ಲ.

ಭಾರತೀಯ ಭಾಷೆಗಳಿಗೆಲ್ಲ ಸಂಸ್ಕೃತವೇ ಮೂಲ. ವರ್ಣಮಾಲೆ, ವ್ಯಾಕರಣ, ಛಂದಸ್ಸು ಎಲ್ಲವೂ ನಾವು ಸಂಸ್ಕೃತದಿಂದಲೇ ಪಡೆದಿದ್ದೇವೆ. ಹಾಗಾಗಿ ಸಂಸ್ಕೃತ ಎಲ್ಲ ಭಾಷೆಗಳಿಗೂ ಮಾತೃಸ್ಥಾನದಲ್ಲಿದೆ. ಸಂಸ್ಕೃತದ ಒಂದು ಸ್ವಾರಸ್ಯವೇನೆಂದರೆ, ಅದರ ಎಲ್ಲ ಪದಗಳೂ ಸ್ವರಧಾತುವಿನಿಂದ ಹುಟ್ಟಿದ್ದು ಎನ್ನುತ್ತಾರೆ. ಜ ಎಂದರೆ ಜನ್ಮ, ಜನನ, ಹುಟ್ಟುವುದು. ಜಲಜ, ನೀರಜ ಎಂದರೆ ನೀರಿನಲ್ಲಿ ಹುಟ್ಟಿದ್ದು.. ಕಮಲ; ಹಾಗೆಯೇ ಗ ಎಂದರೆ ಗಮನ, ಚಲನೆ. ಭುಜಗ, ಎಂದರೆ ಭುಜದ ಮೇಲೆ ಚಲಿಸುವ ವಸ್ತು..... ಪನ್ನಗ, ಉರಗ, ಹಾವು. ಪನ್ನಗಶಯನ, ಪನ್ನಗಾರಿವಾಹನ (ವಿಷ್ಣು) ಹೀಗೆ ಸ್ವರಗಳನ್ನು ಒಂದಕ್ಕೊಂದು ಸೇರಿಸಿ ಹೊಸ ಪದಸಂಕೀರ್ಣವನ್ನು ಪಡೆಯಬಹುದು. ಈ ಹೊಸ ಪದಗಳು ಸ್ವವಿವರಣಾತ್ಮಕ ಪದಗಳಾಗಿರುತ್ತವೆ. ಅಂದರೆ, Self- explainatory words.

ಇದು ಇಂಗ್ಲೀಷಿನಲ್ಲೂ ಇದೆ. ಇಂಗ್ಲೀಷ್ ಭಾಷೆಯಲ್ಲಿ ಪದಜೋಡಣೆ ಸುಲಭವಲ್ಲ, ಆದ್ದರಿಂದ ಅವರು ಗ್ರೀಕ್ ಅಥವಾ ಲ್ಯಾಟೀನ್ ಭಾಷೆಯನ್ನು ಬಳಸಿ ಹೊಸದಾಗಿ ಲಕ್ಷಾಂತರ ಪದಗಳನ್ನು ತಮ್ಮ ಪದಭಂಡಾರಕ್ಕೆ ಸೇರಿಸಿಕೊಂಡಿದ್ದಾರೆ. ಅದರಲ್ಲೂ ವೈಜ್ಞಾನಿಕ ಕ್ಷೇತ್ರದಲ್ಲಿ ಈ ಬೆಳವಣಿಗೆ ವ್ಯಾಪಕವಾಗಿ ಕಂಡುಬರುತ್ತದೆ. Dysdiadochokinesis, sphygmomanometer, ಇವೆಲ್ಲ ಉದಾಹರಣೆಗಳು.

ಇತರ ಭಾಷೆಯ ಪದಗಳನ್ನು ತಮ್ಮದಾಗಿಸಿಕೊಳ್ಳುವ ಪರಿಪಾಠ ಎಲ್ಲ ಭಾಷೆಗಳಲ್ಲೂ ಇದೆ. ಈ ಕೊಟ್ಟು-ಕೊಳ್ಳುವ ಸಂಪ್ರದಾಯ ಭಾಷೆಗಳ ಬೆಳವಣಿಗೆಗೆ ಅತಿ ಮುಖ್ಯ. ದಕ್ಷಿಣ ಭಾಷೆಗಳನ್ನು ಗಮನಿಸಿದರೆ ಸಂಸ್ಕೃತ ಪದಪ್ರಯೋಗದ ಲಾಭವನ್ನು ನಾವು ಪಡೆದಷ್ಟು ಇನ್ನಾವುದೇ ಭಾಷೆಯೂ ಪಡೆದಿಲ್ಲ. ಇಂದು ಕನ್ನಡದಲ್ಲಿರುವ ಎಲ್ಲ ಮಹಾಪ್ರಾಣದ ಪದಗಳಿಗೂ ಮೂಲ ಸಂಸ್ಕೃತವೇ!

ಸಂಸ್ಕೃತದ ತಳಹದಿಯ ಮೇಲೆ ಕನ್ನಡ ನಿಂತಿದ್ದರೂ ಸಂಸ್ಕೃತದಲ್ಲಿಲ್ಲದ ಹಲವು ವಿಶೇಷತೆಗಳು ಕನ್ನಡದಲ್ಲಿವೆ. ಅದನ್ನೂ ಮೀರಿದ ಬೆಳವಣಿಗೆ ಕಂಡಿದೆ ಎಂದು ನನಗೆ ಅನ್ನಿಸುತ್ತದೆ. ಏಕೆಂದರೆ ಸಂಸ್ಕೃತದಲ್ಲಿಲ್ಲದ ಹಲವು ಅಕ್ಷರಗಳು ಕನ್ನಡದಲ್ಲಿವೆ

ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಅವು ಯಾವುವೆಂದರೆ,

೧. ಕನ್ನಡದ ಸ್ವರಗಳಲ್ಲಿ ಎ, ಏ, ಐ, ಒ, ಓ, ಔ ಇದೆಯಲ್ಲ, ಅದರಲ್ಲಿ ಎ ಮತ್ತು ಒ ಹ್ರಸ್ವ ಸ್ವರಗಳು ಸಂಸ್ಕೃತದಲ್ಲಿಲ್ಲ. ಸಂಸ್ಕೃತದಲ್ಲಿ ಏ, ಐ, ಓ, ಔ ಇಷ್ಟೇ. ಎಲ್ಲಿ? ಏನಾಯ್ತು?, ಬೆಕ್ಕಿಗೆ ಬೇಲಿ ಏಕೆ? ಒಬ್ಬ ಓಡಿಬಂದ, ಒನಕೆ ಓಬವ್ವ, ಕೋಳೂರ ಕೊಡಗೂಸು, ಇವುಗಳಲೆಲ್ಲ ಎ, ಏ ಮತ್ತು ಒ, ಓ ಪ್ರಯೋಗಗಳಿವೆ.

೨. ನಿಮಗೆ ಅಚ್ಚರಿಯಾಗಬಹುದು: ಳ ಕನ್ನಡದ್ದು! ನಲ=ನಳ, ಕಮಲ=ಕಮಳ, ಸ್ಥಲ=ಸ್ಥಳ ಹೀಗೆ ಸಂಸ್ಕೃತ ಪದಗಳನ್ನು ಕನ್ನಡದಲ್ಲಿ ಬಳಸುತ್ತೇವೆ. "ಲಳಯೋ ನ ಭೇದಃ" ಎಂದು ಸಂಸ್ಕೃತದಲ್ಲಿ ಸೂತ್ರವನ್ನೆ ಕೊಟ್ಟಿದ್ದಾರೆ. ಇದು ಸಂಸ್ಕೃತಕ್ಕೆ ಅನ್ವಯಿಸಬಹುದು. ಆದರೆ, ಕನ್ನಡದಲ್ಲಿ ಲ ಬೇರೆ, ಳ ಬೇರೆ. ಉದಾ: ಹುಲಿ–ಹುಳಿ, ಹಲ್ಲಿ–ಹಳ್ಳಿ, ಹಲಸು–ಹಳಸು.

೩. ಎರಡು ಅಕ್ಷರಗಳು ಕನ್ನಡದಲ್ಲಿದ್ದವು. ಆದರೆ ಈಗ ಕೈ ಬಿಟ್ಟಿದ್ದೇವೆ. ಅವು ಹಳೆಗನ್ನಡದಲ್ಲಿ ವ್ಯಾಪಕವಾಗಿ ಕಾಣುವ ಱ ಮತ್ತು ೞ ಅಕ್ಷರಗಳು. ಕುಱತೋದದೆಯುಂ, ಅಱತುಕೋ ಎಂಬಲ್ಲಿ ಱ ನ್ನು ಬಳಸುತ್ತಿದ್ದರು. ಅರಿ ಬೇರೆ ಅಱ ಬೇರೆ ಹಾಗೆಯೇ ಅಕ್ಷರ: ಪಟ್ಟ = ಪತ್ತಿ= ಹತ್ತಿ, ಫಲಂ=ಪೞಂ=ಪಣ್=ಹಣ್ಣು. ಬಹುಶಃ ನಾಲಿಗೆಯನ್ನು ಹೊರಳಿಸಿ ಉಚ್ಚರಿಸಲು ಕಷ್ಟಕರವೆಂದೋ ಏನೋ ಆ ಅಕ್ಷರಗಳು ಬಳಕೆಯಲ್ಲಿಲ್ಲ.

ಇಂದು ನಾವು ಇವಲ್ಲದೆ, ಪದಗಳ ಅಂತ್ಯದಲ್ಲಿ ಅನುಸ್ವರಗಳನ್ನೂ, ಅರ್ಧಾಕ್ಷರಗಳನ್ನು ಕೈ ಬಿಟ್ಟಿದ್ದೇವೆ. ತಿಳಿದುಂ, ಅವನುಂ ಹಾಗೆಯೇ ಮೇಣ್, ಕೇಳ್, ಎಂಬ ಪ್ರಯೋಗಗಳು ಈವತ್ತು ಕನ್ನಡದಲ್ಲಿಲ್ಲ.

ನಿಮಗೆ ಆಶ್ಚರ್ಯವಾಗಬಹುದು: ಭಾರತದ ಇನ್ನಾವುದೇ ಭಾಷೆಯಲ್ಲಿಯೂ ಅಂಕೆಗಳಿಲ್ಲ. ಎಲ್ಲರೂ ದೇವನಾಗರಿಯಲ್ಲಿ ಅಂಕೆಗಳನ್ನು ಬಳಸಿದರೆ, ಕನ್ನಡಕ್ಕೆ ತನ್ನದೇ ಆದ ಅಂಕೆಗಳಿವೆ! ಕನ್ನಡದ ಅಂಕಿಗಳು, ೧ ೨ ೩ ೪ ೫ ೬ ೭ ೮ ೯ ೦. ಇವುಗಳಲ್ಲಿಯೂ ೧– ಗ ಒತ್ತು, ೨– ತ ಒತ್ತು, ೩– ನ ಒತ್ತು, ೪– ಳ ಒತ್ತು, ೬– ಮ ಒತ್ತು, ಹೀಗೆ ಇವು ಕನ್ನಡದ ಒತ್ತಕ್ಷರಗಳು. ಸೊನ್ನೆ ಬಹು ವಿಶೇಷವಾದ ಸಂಖ್ಯೆ. ಇದನ್ನು ಎಲ್ಲರೂ ವೃತ್ತಾಕಾರದ ಚಿಹ್ನೆಯಿಂದಲೇ ಗುರುತಿಸುತ್ತಾರೆ. ಸೊನ್ನೆ ಗಣಿತ ಲೋಕಕ್ಕೆ ಭಾರತ ದೇಶದ ಕೊಡುಗೆ ಎಂದು ನಮ್ಮ ದೇಶದ ಕಮ್ಯುನಿಸ್ಟರನ್ನೂ ಸೇರಿ, ಪ್ರಪಂಚದಾದ್ಯಂತ ಎಲ್ಲರೂ ಒಪ್ಪಿದ್ದಾರೆ. ಸೊನ್ನೆ ಎನ್ನುವುದು ಶೂನ್ಯದ ಸಂಕೇತ. ಅದು ಪರಿಪೂರ್ಣತೆ, ನಿರಂತರತೆ ಹಾಗೂ ಅನಂತತೆಯ ಸಂಕೇತವೂ ಹೌದು.

ಇನ್ನು ಕನ್ನಡದಲ್ಲಿ ಒತ್ತಕ್ಷರಗಳನ್ನು ಬಳಸುವ ಕ್ರಮವನ್ನು ನೀವು ಗಮನಿಸಬೇಕು. ಇದು ವಿಶಿಷ್ಟವೋ ವೈಚಿತ್ರವೋ ನೀವೇ ಹೇಳಬೇಕು. ಸಕ್ಕರೆ, ಅಮ್ಮ, ಬಟ್ಟೆ ಇವು ಸಜಾತಿಯ ಒತ್ತಕ್ಷರಗಳಿಗೆ ಉದಾಹರಣೆಗಳು. ಕ ಗೆ ಕ ಒತ್ತು, ಮ ಗೆ ಮ ಒತ್ತು.... ಹೀಗೆ. ಆದರೆ ಸಂಯುಕ್ತಕ್ಷರ ಅಥವಾ ವಿಜಾತಿಯ ಒತ್ತಕ್ಷರಗಳನ್ನು ನೋಡಿ: ಹೆಚ್ಚಿನ ಸಂಯುಕ್ತಾಕ್ಷರಗಳು ಸಂಸ್ಕೃತ ಪದಗಳೇ ಆಗಿವೆ. ರೇಷ್ಮೆ ಎಂಬುದು ರೇ+ಷ್+ಮೆ. ಇಲ್ಲಿ ಉಳಿದ ಭಾಷೆಯವರು ಇದ್ದದ್ದನ್ನು ಇದ್ದ ಹಾಗೇ ಬರೆದರೂ ಕನ್ನಡದಲ್ಲಿ ನಾವು ರೇ+ಷೆ ಬರೆದು ಅದಕ್ಕೆ ಮ ಒತ್ತು ಕೊಡುತ್ತೇವೆ! ಕ್ಷೀಣ ಎಂಬಲ್ಲಿ ಕ್+ಷೀ+ಣ ಎನ್ನುವುದನ್ನು ಕೀ ಗೆ ಷ ಒತ್ತು+ಣ ಬರೆಯುತ್ತೇವೆ. ಏಕೆ ಹೀಗೆ?

ಕನ್ನಡ ಭಾಷೆಯನ್ನು ನಾವು ಎಷ್ಟೊಂದು ಸಂಪದ್ಭರಿತವಾದ ಭಾಷೆ ಎಂದು ಹೇಳಿದರೂ ಕೆಲವು ನ್ಯೂನ್ಯತೆಗಳೂ ಇವೆಯೇನೋ ಎಂದು ನನಗೆ ಅನ್ನಿಸುತ್ತದೆ. ಏಕೆಂದರೆ ಕೆಲವು ಧ್ವನಿಗಳು ಇನ್ನೂ ನಮ್ಮ ಕನ್ನಡದಲ್ಲಿಲ್ಲ. ಆ ಧ್ವನಿಗಳನ್ನು ಕನ್ನಡ ಅಕ್ಷರರೂಪದಲ್ಲಿ ಬರೆಯಲು ನಮಗೆ ಲಿಪಿಗಳ ಕೊರತೆ ಕಂಡುಬರತ್ತವೆ. ಪ್ರಪಂಚದಲ್ಲಿ ಇಂದು ಎಲ್ಲಾ ಕ್ಷೇತ್ರಗಳಲ್ಲಿಯೂ ತೀವ್ರಗತಿಯ ಅಭಿವೃದ್ಧಿಯನ್ನು ಕಾಣುತ್ತಿದ್ದೇವೆ. ಅದರಲ್ಲೂ ಆಧುನಿಕ ವಿಜ್ಞಾನದ ಚಟುವಟಿಕೆಗಳು ಬೆಳೆದು ಅಭಿವೃದ್ಧಿಸುತ್ತಿರುವ ಪಾಶ್ಚಾತ್ಯ ರಾಷ್ಟ್ರಗಳಲ್ಲಿ. ಅಲ್ಲಿಯ ಭಾಷೆಗಳು ವಿಜ್ಞಾನದ ಭಾಷೆಯನ್ನು ಸಮರ್ಥವಾಗಿಯೂ, ಸ್ವಾಭಾವಿಕವಾಗಿಯೂ ಅಭಿವ್ಯಕ್ತಿಸಬಲ್ಲವು; ಅವು ಸಾಹಿತ್ಯದ ಇತರ ಪ್ರಕಾರಗಳಾದ ಕತೆ–ಕಾದಂಬರಿ, ವಿಚಾರಸಾಹಿತ್ಯಗಳನ್ನು ಬರೆಯುವಷ್ಟು ಸುಲಭ ಮತ್ತು ಸಹಜಕ್ರಿಯೆ ಆಗಿವೆ.

ಇಂಗ್ಲೀಷ್ ಭಾಷೆಗೂ ಭಾರತದ ಯಾವುದೇ ಭಾಷೆಗೂ ಜ್ಞಾತಿಸಂಬಂಧವಿಲ್ಲ. ಅದು ಪೂರ್ಣ ಪರಕೀಯ ಭಾಷೆ. ಹೀಗಾಗಿ ಇಲ್ಲಿ ಕೊಡು–ಕೊಳ್ಳುವ ಪ್ರಕ್ರಿಯೆ ಹಲವಾರು ಸಮಸ್ಯೆಗಳಿಗೆ ಎಡೆ ಮಾಡಿಕೊಟ್ಟಿದೆ. ವಿದ್ಯಾರ್ಥಿಗಳಿಗೆ ತಾಯಿನುಡಿಯಲ್ಲಿಯೇ ಸಮಸ್ತ ಶಿಕ್ಷಣವೂ ಒದಗಬೇಕೆಂಬುದು ಎಲ್ಲರೂ ಒಪ್ಪತಕ್ಕ ವಿಚಾರ. ಆದರೆ ಕನ್ನಡ ಪಠ್ಯಪುಸ್ತಕ ರಚನಾಕಾರ್ಯದಲ್ಲಿ ಮತ್ತು ಅನುವಾದಕಾರ್ಯಗಳಲ್ಲಿ ವಿಜ್ಞಾನದ ಪಾರಿಭಾಷಿಕ ಪದಗಳನ್ನು ನೇರವಾಗಿ ಆಂಗ್ಲಭಾಷೆಯಲ್ಲಿಯೇ ಬರೆಯಬೇಕಾಗಿರುವ ಅನಿವಾರ್ಯ ಸಂದಿಗ್ಧತೆಯೂ ಇದೆ.

ಆಂಗ್ಲ ಭಾಷೆಯ ಪದಗಳನ್ನು ಕನ್ನಡದಲ್ಲಿ ಬರೆಯಬೇಕಾದ ಪ್ರಮೇಯ ಬಂದಾಗ, ಐದು ವಿಶೇಷ ಸಂದರ್ಭಗಳಲ್ಲಿ ಜಟಿಲ ಸನ್ನಿವೇಶವನ್ನು ನಾವು ಎದುರಿಸುತ್ತೇವೆ. ಕನ್ನಡ ವರ್ಣಮಾಲೆಯಲ್ಲಿ ಇಲ್ಲದೆ ಇರುವ ಐದು ಸ್ವರಗಳು ಇಂಗ್ಲೀಷಿನಲ್ಲಿವೆ. ಇವುಗಳಲ್ಲಿ ಎರಡು ಪ್ರಕರಣಗಳಿಗೆ ನಾವು ಈಗಾಗಲೇ ಉತ್ತರ ಕಂಡುಹಿಡಿದುಕೊಂಡಿರುತ್ತೇವೆ. ಅವು ಯಾವುವೆಂದರೆ, Fingerprints ಎಂದು ಬರೆಯುವಾಗ ನಾವು ಉಪಯೋಗಿಸುವ 'F' ಮತ್ತು 'Zebra' ಎನ್ನುವಾಗ ನಾವು ಉಪಯೋಗಿಸುವ 'Z'.ಇಲ್ಲಿ ನಾವು 'ಫ' ದ ಕೆಳಗೆ ಮತ್ತುತು 'ಜ' ದ ಕೆಳಗೆ ಚುಕ್ಕೆಗಳನ್ನಿರಿಸಿ ಫ಼ ಮತ್ತು ಜ಼ ಅಕ್ಷರಗಳನ್ನು ನಾವು ತಯಾರು ಮಾಡಿಕೊಂಡಿರುತ್ತೇವೆ. ಈ ಅಕ್ಷರಗಳು ಈಗ ವ್ಯಾಪಕವಾಗಿ ಚಾಲ್ತಿಯಲ್ಲಿಯೂ ಇದ್ದು ಅವು ಕನ್ನಡದ ಸ್ವಾಭಾವಿಕ ವ್ಯಂಜನಗಳೇ ಆಗಿಬಿಟ್ಟಿವೆ. ಜ಼ೂ, ಜ಼ೀಬ್ರಾ ಎಂಬಲ್ಲಿನ ಜ಼ ಮತ್ತು ಫ಼್ರೆಂಡ್, ಫ಼್ರೂಟ್ ಎಂಬಲ್ಲಿನ ಫ಼ ಇವು ಕನ್ನಡ ವರ್ಣಮಾಲೆಯಲ್ಲಿಲ್ಲದಿದ್ದರೂ ಓದುತ್ತ ಓದುತ್ತ ನಮ್ಮದಾಗಿಸಿಕೊಂಡುಬಿಟ್ಟಿದ್ದೇವೆ.

ಈ ಎರಡು ಅಕ್ಷರಗಳೊಂದಿಗೆ ನಮಗೆ ಅವಶ್ಯವಿರುವ ಮೂರು ವಿಶೇಷ ಸ್ವರಗಳಿವೆ. ನಾನೀಗ ಹೇಳಲಿರುವುದು ಈ ಎರಡು ಅಕ್ಷರಗಳ ಬಗ್ಗೆ. ಇವುಗಳನ್ನು ಅರ್ಧಸ್ವರಗಳೆಂದೂ ನಾವು ಕರೆಯಬಹುದು. ಇಂಗ್ಲಿಷ್‌ನ man, pot ಮತ್ತು earth ಎಂಬಲ್ಲಿ ಬರುವ a, o, e , ಸ್ವರಗಳು. ಉದಾಹರಣೆಗೆ and ಎಂಬ ಆಂಗ್ಲ ಪದವನ್ನು ಕನ್ನಡದಲ್ಲಿ ಲೇಖಿಸಬೇಕಾದರೆ ಅದನ್ನು ಅಂಡ್, ಆಂಡ್, ಏಂಡ್ ಅಥವಾ ಆ್ಯಂಡ್ ಎಂದು ಬರೆಯಬೇಕಾಗುತ್ತದೆ. ಯಾವುದೂ ಮೂಲ 'and' ಗೆ ಸಮಾನವಾಗುವುದಿಲ್ಲ.

ಹಾಗೆಯೇ shop ಎಂಬ ಆಂಗ್ಲ ಪದವನ್ನು ಶಾಪ್ ಅಥವಾ ಶೋಪ್ ಎಂದು ಬರೆಯುತ್ತೇವೆ.

ಈ ಮೂರು ಅರ್ಧಸ್ವರಗಳು ಆಡುಭಾಷೆಯಲ್ಲಿ, ಅದರಲ್ಲೂ ಉತ್ತರ ಕರ್ನಾಟಕದ ಕನ್ನಡದಲ್ಲಿ, ಅಲ್ಲದೆ ಕನ್ನಡ ಲಿಪಿಯನ್ನು ಅಧಿಕೃತವಾಗಿ ತಮ್ಮದಾಗಿಸಿಕೊಂಡಿರುವ ತುಳು, ಕೊಡವ, ಕೊಂಕಣಿ ಭಾಷೆಗಳಲ್ಲಿ ವ್ಯಾಪಕ ಬಳಕೆ ಕಂಡುಬರುತ್ತವೆ. ಇವು ಅನುಕ್ರಮವಾಗಿ ಯಾವುವೆಂದರೆ, ಆ ಸ್ವರದ ಅರ್ಧ "ಆ", ಆ ಮತ್ತು ಎ ಸ್ವರಗಳ ಅರ್ಧಸ್ವರ "ಆ",ಹಾಗೂ ಆ ಮತ್ತು ಒ ಸ್ವರಗಳ "ಆ" . ಇವುಗಳಿಗೆ ಬಳಕೆಯಲ್ಲಿರುವ ಕನ್ನಡ ಲಿಪಿಯಲ್ಲಿ ತಕ್ಕ ಅಕ್ಷರಗಳಿಲ್ಲ, ನಿಘಂಟುಗಳಲ್ಲಿ ಕೆಲವು ಚಿಹ್ನೆಗಳಿಂದ ಗುರುತಿಸುತ್ತೇವೆ. ಆದರೆ ಅವು ನಿಘಂಟುಗಳಿಗೆ ಮಾತ್ರ ಸೀಮಿತವಾಗಿವೆ. ಕೆಳಗಿನ ಉದಾಹರಣೆಗಳನ್ನು ನೋಡಿ:

ಕೋಡಗನ ಕೋಳಿ ನುಂಗಿತ್ತ ನೋಡವ್ವ ತಂಗಿ ಕೋಡಗನ ಕೋಳಿ ನುಂಗಿತ್ತ

ಸಂತ ಶಿಶುನಾಳ ಶರೀಫರ ಈ ಗೀತೆಯಲ್ಲಿ ನುಂಗಿತ್ತ ಎನ್ನುವಾಗ ತ್ತ ಮತ್ತು ವ್ವ ಇವುಗಳ ಉಚ್ಚರಣೆಯಲ್ಲಿ "ಆ" ಪ್ರಯೋಗವನ್ನು ಕಾಣಬಹುದಾಗಿದೆ. ಅದೇ ರೀತಿ ಬರ್ತಾನ, ಹೋಗ್ತಾನ.........

ನೀ ಹೀಂಗ ನೋಡಿದರೆ ನನ್ನ, ನಾ ತಿರುಗಿ ಹಾಂಗ ನೋಡಲೇ ನಿನ್ನ?

ಇದು ದ.ರಾ. ಬೇಂದ್ರೆಯವರ ಕೃತಿಯ ಒಂದು ಸಾಲು. ಇಲ್ಲಿ ಹ್ಯಾಂಗ, ಹೇಂಗೆ ಇವಾವುವೂ ಮೂಲ "ಆ"ಗೆ ಸಮನಾಗುವುದಿಲ್ಲ.

ಕೊಡವ ಭಾಷೆಯ ಒಂದು ಸಂಭಾಷಣೆ ಗಮನಿಸಿ: 'ನೀ ಎಕ್ಕ ಪೋಪ?' 'ನಾನ್ ನಾರಾಜೆ ಪೋಪಿ' ಬೋಂಡಾ, ತಿಂಗಳಾಚೆ ಪೋ'. ಇನ್ನು ಈ ಭಾಷೆಯಲ್ಲಿ ಮಗ-ಮಗಳು ಎನ್ನುವುದನ್ನು ಮೋಂವ, ಮೋವ ಎನ್ನುತ್ತಾರೆ. ಇಲ್ಲೆಲ್ಲ ಈ ಮೂರು ಅರ್ಧಸ್ವರಗಳ ಬಳಕೆ ಎದ್ದು ಕಾಣುತ್ತವೆ. Transphonetic ಭಾಷೆಯೆಂಬ ಹೆಗ್ಗಳಿಕೆಯುಳ್ಳ ಕನ್ನಡದಲ್ಲಿ ಹೇಳುವುದೊಂದು, ಬರೆಯುವುದೊಂದು ಆಗಬಾರದಲ್ಲ!

ಇಲ್ಲಿ ನಾನು ಬಹು ಸರಳವಾದ ಉದಾಹರಣೆಗಳನ್ನು ನೀಡಿದ್ದೇನೆ. ಆದರೆ ನಮಗೆ ಸಮಸ್ಯೆ ಎದುರಾಗುವುದು ಒಂದು ಪ್ರೌಢ ಪ್ರಬಂಧ, ಅದರಲ್ಲೂ ವಿಜ್ಞಾನ ಲೇಖನವನ್ನು, ಬರೆಯುವಾಗ.

ಸಾಧಾರಣವಾಗಿ ನಾವು ಅಂತಹ ಸಂದರ್ಭಗಳಲ್ಲಿ ಆ ಆಂಗ್ಲಪದವನ್ನು ಕನ್ನಡದಲ್ಲಿ ಬರೆದು, ಆವರಣದಲ್ಲಿ ಅದನ್ನೇ ಇಂಗ್ಲಿಷಿನಲ್ಲಿಯೂ ಬರೆದು ಮುಂದುವರಿಯುವ ಪದ್ಧತಿಯನ್ನು ಅನುಸರಿಸುತ್ತೇವೆ. ಉದಾಹರಣೆಗೆ Paracetamol ಎಂಬ ಔಷಧಿಯ ಹೆಸರನ್ನು ಬರೆಯಬೇಕಾದಲ್ಲಿ **ಪ್ಯಾರಾಸಿಟಮೋಲ್** ಎಂದು ಕನ್ನಡದಲ್ಲಿ ಬರೆದು, ಅದನ್ನು ಓದುಗರು ಸರಿಯಾಗಿ ಅರ್ಥಮಾಡಿಕೊಂಡರೋ ಇಲ್ಲವೋ ಎಂಬ ಸಂಶಯದಿಂದ ಅದನ್ನು ಆವರಣದಲ್ಲಿ ಇಂಗ್ಲೀಷಿನಲ್ಲಿಯೂ ಬರೆಯುತ್ತೇವೆ.

ಆದ್ದರಿಂದ ಈ ಮೂರು ಅರ್ಧಸ್ವರಗಳಿಗೆ ಸೂಕ್ತವಾದ ಲಿಪಿಯನ್ನು ನಾವು ಸಿದ್ಧಪಡಿಸಲೇಬೇಕಾದ ಸಮಯ ಬಂದಿದೆ. ಕನ್ನಡಕ್ಕೆ ಅವಶ್ಯವಿರುವ ಇಂತಹ

ಬದಲಾವಣೆಗಳನ್ನು ಮಾಡಿ ಪ್ರಚಾರ ಪಡಿಸಿದಲ್ಲಿ ಕೊನೆಗೆ ಮುಂದೊಂದು ದಿನ ಯಾವುದೇ ಇಂಗ್ಲೀಷ್ ಅಕ್ಷರವನ್ನು ಬಳಸದೆ, ಸಂಪೂರ್ಣ ಕನ್ನಡದಲ್ಲಿ ಒಂದು ಪ್ರಬುದ್ಧ ಲೇಖನವನ್ನು ಸಿದ್ಧಪಡಿಸಬಹುದು.

ನಾನು ಹೇಳಿದ ಮೂರು ಅರ್ಧಸ್ವರಗಳು ಕೊಡವ, ತುಳು, ಕೊಂಕಣಿ ಭಾಷೆಗಳಲ್ಲಿ ಹೇರಳವಾಗಿವೆ. ಅಂತಹ ಸನ್ನಿವೇಶಗಳಲ್ಲೆಲ್ಲಾ ಅರ್ಧಸ್ವರಗಳ ಪ್ರಯೋಗ ಅವಶ್ಯವೆನಿಸುತ್ತದೆ ಮತ್ತು ಆಗೆಲ್ಲಾ ಈ ಭಾಷೆಗಳ ಬರವಣಿಗೆ ತಡವರಿಸುತ್ತದೆ.ಕನ್ನಡಕ್ಕೆ ಸಂಸ್ಕೃತ ಹೆಗೆ ಮಾತೃಸ್ಥಾನದಲ್ಲಿದೆಯೋ ಹಾಗೆ ಕೊಡವ, ತುಳು, ಕೊಂಕಣಿ ಭಾಷೆಗಳಿಗೆ ಕನ್ನಡ ಮಾತೃಸ್ಥಾನದಲ್ಲಿದೆ. ಇಂತಹ ಸಂದಿಗ್ಧ ಸಂದರ್ಭಗಳಲ್ಲಿ ಕನ್ನಡದತ್ತ ಸಹಾಯ ಯಾಚಿಸುತ್ತದೆ ಎನ್ನಿಸುವುದಿಲ್ಲವೇ?

ಇವಲ್ಲದೆ, ಉತ್ತರ ಕರ್ನಾಟಕದಿಂದ ಹಿಡಿದು ದಕ್ಷಿಣದವರೆಗೂ ಇರುವ ನೂರಾರು ಗ್ರಾಮ್ಯಭಾಷೆಗಳಲ್ಲಿ ಕೂಡ ಈ ಐದು ಸ್ವರಪ್ರಯೋಗಗಳೂ ಯಥೇಚ್ಛವಾಗಿ ಬರುತ್ತವೆ. ಪ್ರಕೃತ ಆಧುನಿಕ ಲೇಖಕರಲ್ಲನೇಕರು ಗ್ರಾಮ್ಯಭಾಷೆಯಲ್ಲಿಯೇ ಲೇಖನಗಳನ್ನೂ, ಕತೆಗಳನ್ನೂ ಬರೆಯುವುದನ್ನು ಈಗ ನಾವು ಕಾಣುತ್ತಿದ್ದೇವೆ. ಇಂತಹ ಎಲ್ಲ ಸಂದರ್ಭಗಳಲ್ಲಿಯೂ ಅರ್ಧಸ್ವರ ಪ್ರಯೋಗಗಳಿಗೆ ಹೇರಳ ಅವಕಾಶಗಳಿವೆ. ಆಗೆಲ್ಲ ಸೂಕ್ತ ಅಕ್ಷರಕ್ಕೆ ತಡಕಾಡುವಂತಾಗುತ್ತದೆ.

ಹೀಗಾಗಿ ನಾವು ಕನ್ನಡದಲ್ಲಿ ಈ ಮೂರು ಅರ್ಧಸ್ವರಗಳನ್ನು ಸೇರಿಸಿಕೊಂಡು ಅವುಗಳಿಗೆ ಸೂಕ್ತ ಲಿಪಿಯನ್ನು ರೂಪಿಸಿಕೊಂಡುಬಿಟ್ಟರೆ, ಉಚ್ಛರಿಸಬಹುದಾದ ಎಲ್ಲ ಧ್ವನಿಗಳನ್ನು ಅಕ್ಷರರೂಪದಲ್ಲಿ ಬರೆಯುವಂತಹ ಸಾಮರ್ಥ್ಯ ಕನ್ನಡಕ್ಕೆ ಬರುತ್ತದೆ. ಕನ್ನಡದಲ್ಲಿನ ಈ ಧ್ವನಿಭಂಡಾರ ಮತ್ತು ಈ ವಿಶೇಷತೆ ಪ್ರಪಂಚದ ಇನ್ನಾವುದೇ ಭಾಷೆಗೂ ಇಲ್ಲ!

೫೦ರ ಜೊತೆಗೆ ಇನ್ನೂ ಐದು ಸ್ವರಗಳೇ? ಒಂದು ಭಾಷೆಗೆ ಇಷ್ಟು ಅಕ್ಷರಗಳು ಬೇಕೇ? ಎಂಬುದನ್ನು ಆಲೋಚಿಸೋಣ. ಕನ್ನಡ ಭಾಷೆಯ ಔನ್ನತ್ಯವನ್ನು ನಾವು ತಿಳಿದುಕೊಳ್ಳಬೇಕಾದಲ್ಲಿ ಇತರ ಭಾಷೆಗಳೊಂದಿಗೆ ತುಲನಾತ್ಮಕ ದೃಷ್ಟಿಯಿಂದ ನೋಡಬೇಕಾಗುತ್ತದೆ.

ಮೊದಲಿಗೆ ನಮಗೆ ಚಿರಪರಿಚಿತವಾದ ಇಂಗ್ಲೀಷ್: ಬರೇ ೨೬ ಅಕ್ಷರಗಳಿಂದಲೇ ಪ್ರಪಂಚದಲ್ಲಿಯೇ ಅತಿ ಹೆಚ್ಚು, ಅಂದರೆ ಸುಮಾರು ಎರಡು ಲಕ್ಷಕ್ಕೂ ಹೆಚ್ಚು, ಪದಭಂಡಾರವನ್ನು ಹೊಂದಿದ ಭಾಷೆ ಇದು. ಆದರೆ ಈ ಭಾಷೆಯ ವರ್ಣಮಾಲೆಗೆ ಯಾವುದೇ ಕ್ರಮವಿಲ್ಲ. ಕೇವಲ ಐದೂವರೆ ಸ್ವರಗಳು, ಅಸಂಬದ್ಧ ವ್ಯಂಜನಮಾಲೆ, ಇವುಗಳಲ್ಲಿ V ಮತ್ತು W ಎರಡೂ ಒಂದೇ! ಇಲ್ಲಿ 'ಡಬಲ್ ಯು' ಏನಿದು? ಇಂಗ್ಲೀಷಿನಲ್ಲಿ ಆ ಭಾಷೆಯ ಎಲ್ಲ ಪದಗಳ ಅಕ್ಷರ ಜೋಡಣೆಯೂ ಪೂರ್ವ ನಿರ್ಧರಿತ. ಒಂದು ಪದವನ್ನು ಎಲ್ಲರೂ ಹೀಗೇ ಬರೆಯಬೇಕು, ಅಂತೆಯೇ ಹೀಗೇ ಉಚ್ಛರಿಸಬೇಕು ಎಂಬ ಕಟ್ಟಳೆ! ಯಾರು ಪ್ರಶ್ನಿಸುವಂತಿಲ್ಲ! ಅವರ ಪದಜೋಡಣೆಯ ವಿಧಾನದಲ್ಲೂ ಯಾವ ಸ್ಥಿರ ನಿಯಮವೂ ಇಲ್ಲ. ಇಷ್ಟಿದ್ದರೂ ಇಂಗ್ಲೀಷಿನವರು ಆ ಮಟ್ಟವನ್ನು ಹೇಗೆ ಸಾಧಿಸಿದರು? ಅವರಲ್ಲಿರುವುದು ಬರೇ ೨೬ ಅಕ್ಷರಗಳಲ್ಲ. ೨೬ ಅಕ್ಷರಗಳಿಗೆ ದೊಡ್ಡಕ್ಷರ, ಸಣ್ಣ ಅಕ್ಷರ ಹೀಗೆ ೫೨! ಅವರಲ್ಲಿಲ್ಲದ ಧ್ವನಿಗೆ

ಅಕ್ಷರ-ಅಕ್ಷರಗಳನ್ನು ಸೇರಿಸಿ ರೂಪಿಸಿಕೊಂಡಿದ್ದಾರೆ. ಶ್ ಗೆ sh, ಚ್ ಗೆ ch, ಹೀಗೆ. ನನ್ನ ಅಜ್ಜ ಹೇಳುತ್ತಿದ್ದರು.: 'ಕನ್ನಡವನ್ನು ನೀನು ಎಷ್ಟು ಸ್ಪಷ್ಟವಾಗಿ ಮಾತನಾಡುತ್ತೀಯೋ ಅದು ಅಷ್ಟು ಚಂದ; ಅದೇ ಇಂಗ್ಲೀಷಿನಲ್ಲಿ ಮಾತನಾಡುವಾಗ ಎಷ್ಟು ನುಂಗುತ್ತೀಯೋ ಅದು ಅಷ್ಟು ಫ್ಯಾಶನ್!'

ಚೀನಾ ಭಾಷೆಯದು ಪುರಾತನ ಕಾಲದ ಬರಹದಂತೆ ಚಿತ್ರಲಿಪಿ. ಅವರಲ್ಲಿ ಅಸಂಖ್ಯ ಅಕ್ಷರಗಳು. ಕಲಿಯುವುದೂ, ಬರೆಯುವುದೂ ಕಷ್ಟ. ಮನೆ ಬರೆಯಬೇಕಾದರೆ ಮನೆಯ ಚಿತ್ರವನ್ನೇ ಬರೆಯುತ್ತಾರೆ. ಎರಡು ಮನೆಯ ಚಿತ್ರ ಬರೆದರೆ, ಅದು ಒಂದು ವಠಾರ, ಮೂರಿದ್ದರೆ, ಗ್ರಾಮ! ಹಾಗೇ ಮರವನ್ನು ಬರೆಯಬೇಕಿದ್ದಲ್ಲಿ ಒಂದು ಮರದ ಚಿತ್ರ, ಅಲ್ಲಿ ಎರಡು ಮರಗಳ ಚಿತ್ರ ಇದ್ದರೆ ಅದು ಒಂದು ತೋಪು, ಮೂರಿದ್ದರೆ, ಅದೇ ಕಾಡು!

ನೀವು ಯಾವುದಾದರು ಎಲೆಕ್ಟ್ರಾನಿಕ್ ಉಪಕರಣದ ಬಹುಭಾಷಾ ಕೈಪಿಡಿಯನ್ನು ಗಮನಿಸಿ. ಅದರಲ್ಲಿ ಆ ಕಂಪೆನಿಯ ವಿಳಾಸವನ್ನು ಬರೆದಿರುವಲ್ಲಿ ದೂರವಾಣಿ ಸಂಖ್ಯೆ ಬರೆಯುವಾಗ ಚೀನಾ ಭಾಷೆಯಲ್ಲಿ ಟೆಲಿಫೋನ್‌ನ ಚಿತ್ರವೇ ಇರುತ್ತದೆ!

ಇನ್ನು ನಮಗೆ ಹತ್ತಿರವಾದ ತಮಿಳು: ತಮಿಳರಿಗೆ ಮೂರು ವಿಶಿಷ್ಟ ಗುಣಗಳಿವೆ. ಭಾಷಾ ದುರಭಿಮಾನ, ಇಂಗ್ಲೀಷ್ ವ್ಯಾಮೋಹ, ಪರಭಾಷಾ ದ್ವೇಷ. ತಮಗೆ ಪ್ರಿಯವಾದ ಇಂಗ್ಲಿಷಿಗೆ ೨೬ ಅಕ್ಷರಗಳಿರುವಾಗ ನಮಗೇಕೆ ಸಂಸ್ಕೃತದ ೫೦, ಎಂದು ಎಲ್ಲವನ್ನೂ ಕೈಬಿಟ್ಟು ಈಗ ೨೮ ಅಕ್ಷರಗಳಿಗೆ ಬಂದು ನಿಂತಿದ್ದಾರೆ. ಅವರ ಗುರಿ, ೨೬ ಅಥವಾ ಅದಕ್ಕಿಂತ ಕಡಿಮೆ!

ವಾದವೇ ಮಾಡುವುದಾದಲ್ಲಿ, ಖಂಡಿತವಾಗಿಯೂ ಪದಗಳ ಸೃಷ್ಟಿಗೆ ೫೦-೫೫ ಅಕ್ಷರಗಳು ಬೇಡ. ಉದಾಹರಣೆಗೆ ನಮ್ಮಲ್ಲಿ ಎರಡೇ ಸ್ವರಗಳು ಇವೆಯೆಂದು ಭಾವಿಸೋಣ: ಕ್, ಪ್, ಅ ಮತ್ತು ಇ. ಇವುಗಳಿಂದ ನಮಗೆ ನಾಲ್ಕು ಅಕ್ಷರಗಳು ದೊರಕುತ್ತವೆ: ಕ, ಕಿ, ಪ, ಪಿ, ಈ ನಾಲ್ಕು ಅಕ್ಷರಗಳನ್ನು ಬಳಸಿ ಎರಡಕ್ಷರ, ಮೂರಕ್ಷರ, ನಾಲ್ಕಕ್ಷರ, ಐದಕ್ಷರ ಮತ್ತು ಆರಕ್ಷರದ ಎಷ್ಟು ಪದಗಳನ್ನು ಸೃಷ್ಟಿಸಬಹುದು? ನಿಮಗೆ ಆಶ್ಚರ್ಯವಾಗಬಹುದು. ಒಟ್ಟು ೫೪೨೬ ಪದಗಳು ದೊರಕುತ್ತವೆ! ಮತ್ತೊಂದೇ ಸ್ವರ ಅಥವಾ ವ್ಯಂಜನವಿದ್ದಲ್ಲಿ ಈ ಪಟ್ಟಿ ಲಕ್ಷ ತಪ್ಪುತ್ತದೆ! ಕಕಪಿಕಪ, ಕಿಪಪಿಕ, ಕಿಕಿಪ, ಪಕಕಿ, ಕಕ, ಪಿಪ...ಇವೇನು ಅರ್ಥವತ್ತಾದ ಪದಗಳೇ? ಹೀಗೆ ಮಾತನಾಡಲು ನಾವೇನು ಪ್ರಾಣಿಗಳೇ? ಕೆಲವು ಭಾಷೆಗಳಲ್ಲಿ ಮಾತನಾಡುವಾಗ ಪದಗಳ ಉಚ್ಚರಣೆಯಲ್ಲಿ ಏಕತಾನತೆಯನ್ನು ನೀವು ಗಮನಿಸಿರಬಹುದು. ಕಡಿಮೆ ಸಂಖ್ಯೆಯ ಅಕ್ಷರಗಳಿರುವ ಭಾಷೆಗಳಲ್ಲೆಲ್ಲಾ ಇದು ಎದ್ದು ಕಾಣುತ್ತದೆ. ಬಾಯ್ತುಂಬ ವಿವಿಧ ಧ್ವನಿಗಳಿಂದ ಕೂಡಿದ ಸಮೃದ್ಧವಾದ ಪದಗಳನ್ನು ಮಾತನಾಡುವ ಸಾಮರ್ಥ್ಯ ಮನುಷ್ಯನಿಗೆ ಪ್ರಕೃತಿದತ್ತವಾಗಿ ಬಂದಿರುವಾಗ ಖಂಡಿತವಾಗಿಯೂ ಕನ್ನಡದ ಎಲ್ಲ ಅಕ್ಷರಗಳೂ ಬೇಕು. ಅದು ನಮ್ಮ ಹೆಗ್ಗಳಿಕೆ!

ಸಾಧಾರಣವಾಗಿ ಒಂದು ಭಾಷೆಯ ಪದಗಳನ್ನು ಮತ್ತೊಂದು ಭಾಷೆಯ ಲಿಪಿಯಲ್ಲಿ ಬರೆಯುವುದು ಅಸಾಧ್ಯದ ಮಾತು. ಆದರೆ, ಪ್ರಪಂಚದ ಯಾವುದೇ

ಭಾಷೆಯನ್ನೂ ನಾವು ಕನ್ನಡದ ಲಿಪಿಯಲ್ಲಿ ಸಮರ್ಪಕವಾಗಿ ಬರೆಯಬಹುದು. ಏಕೆಂದರೆ ಕನ್ನಡದಲ್ಲಿ ನಾವು ಉಚ್ಚರಿಸಬಹುದಾದ ಎಲ್ಲ ಧ್ವನಿಗಳಿಗೂ ಅಕ್ಷರಗಳಿವೆ. ಬೇರೆಲ್ಲ ಭಾಷೆಗಳಲ್ಲಿರುವ ಧ್ವನಿಗಳಿಗೆ ಕನ್ನಡದಲ್ಲಿ ಲಿಪಿಯಿರುವುದೇ ಈ ವೈಶಿಷ್ಟ್ಯಕ್ಕೆ ಕಾರಣ. ಇದು ನಮ್ಮ ನುಡಿಯ ಅತಿಶಯ ವಿಶೇಷತೆ!

ಸಾವಿರಾರು ವರ್ಷಗಳ ಇತಿಹಾಸವುಳ್ಳ ಕನ್ನಡ ಭಾಷೆಯನ್ನು ಅದರ ಕಾಲಕ್ಕೆ ಅನುಗುಣವಾಗಿ ಹಳೆಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಎಂದು ಸ್ಥೂಲವಾಗಿ ಕರೆಯುತ್ತಾರೆ. ಅದರಲ್ಲೂ ಪ್ರಾಚೀನ ಹಳೆಗನ್ನಡ ಹಾಗೂ ನವ್ಯ ಹೊಸಗನ್ನಡ ಎಂದು ಪುನರ್ವಿಂಗಡಿಸುವುದೂ ಉಂಟು. ಒಟ್ಟಾರೆ ಹೇಳುವುದಾದರೆ, ೧೨ ನೇ ಶತಮಾನಕ್ಕಿಂತ ಹಿಂದಿನದ್ದು ಹಳೆಗನ್ನಡ, ೧೩ ರಿಂದ ೧೬ ರರವರೆಗೆ ನಡುಗನ್ನಡ ಮತ್ತು ೧೭ನೇ ಶತಮಾನದಿಂದೀಚೆಗೆ ಹೊಸಗನ್ನಡ ಎನ್ನುತ್ತಾರೆ.

ಆದರೆ ನನ್ನ ಪ್ರಕಾರ, ಸಾಹಿತ್ಯಕ ದೃಷ್ಟಿಯಿಂದ ಈ ವಿಂಗಡಣೆ ಸರಿಯಾಗಿರಬಹುದೇ ವಿನಃ ಆಡುಭಾಷೆಯಾಗಿ ಕನ್ನಡ ಹೆಚ್ಚೇನೂ ಬದಲಾಗಿಲ್ಲವೆಂದೇ ಅನ್ನಿಸುತ್ತದೆ. ಕೆಲವು ಉದಾಹರಣೆಗಳಿಂದ ಈ ಮಾತು ಸ್ಪಷ್ಟವಾಗುತ್ತದೆ.

೧. ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ
ಅನ್ಯರಿಗೆ ಅಸಹ್ಯ ಪಡಬೇಡ।
ತನ್ನ ಬಣ್ಣಿಸಬೇಡ ಇದಿರ ಹಳಿಯಲುಬೇಡ॥
ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ।
ಇದೇ ನಮ್ಮ ಕೂಡಲಸಂಗಮದೇವನೊಲಿಸುವ ಪರಿ॥

– ಭಕ್ತಿ ಭಂಡಾರಿ ಬಸವಣ್ಣ, ೧೨ನೇ ಶತಮಾನ

ಇಲ್ಲಿ ಕಳಬೇಡ, ಕೊಲಬೇಡ ಇವೆಲ್ಲ ಯಾವ ಮಗುವಿಗೂ ಅರ್ಥವಾಗಬಲ್ಲ ಮಾತುಗಳು. ಇನ್ನೊಂದು ವಚನವನ್ನು ನೋಡಿ:

ಹಿಂಡನಗಲಿ ಹಿಡಿವಡೆದ ಕುಂಜರ ತನ್ನ ವಿಂಧ್ಯವ ನೆನೆವಂತೆ ನೆನೆವೆನಯ್ಯಾ।
ಬಂಧನಕ್ಕೆ ಬಂದ ಗಿಳಿ ತನ್ನ ಬಂಧುವ ನೆನೆವಂತೆ ನೆನೆವೆನಯ್ಯಾ।
ಕಂದಾ ನೀನಿತ್ತ ಬಾ ಎಂದು ನೀವು ನಿಮ್ಮಂದವ ತೋರಯ್ಯಾ ಚೆನ್ನಮಲ್ಲಿಕಾರ್ಜುನಾ॥

– ಅಕ್ಕಮಹಾದೇವಿ, ೧೨ನೇ ಶತಮಾನ

ಇಲ್ಲಿಯ ಭಾಷೆ ಕ್ಲಿಷ್ಟಕರ ಮತ್ತು ಕಾಲದಲ್ಲಿ ಸ್ವಲ್ಪ ಹಿಂದಿನದೇನೋ ಅನ್ನಿಸುವುದಿಲ್ಲವೇ? ಆದರೆ ಇಬ್ಬರೂ ಸಮಕಾಲೀನರು! ಕಾಲಘಟ್ಟದಲ್ಲಿ ಇನ್ನೂ ಮುಂದೆ ಹೋಗೋಣ:

೨. ಲೊಳಲೊಟ್ಟೆ ಬದುಕು ಲೊಳಲೊಟ್ಟೆ
ಆನೆ ಒಂಟೆ ಕುದುರೆ ಎಲ್ಲ ಲೊಳಲೊಟ್ಟೆ
ನಿನ್ನ ನೆಂಟರು ಇಷ್ಟರು ಲೊಳಲೊಟ್ಟೆ

– ಪುರಂದರದಾಸರು, ಕ್ರಿ.ಶ. ೧೫೪೦

ಇಲ್ಲಿ ಬರುವ ಆನೆ, ಕುದುರೆ, ಒಂಟೆ ಎಲ್ಲವೂ ಒಂದು ಶಿಶುವಿಗೂ ಅರ್ಥವಾಗುತ್ತದೆ. ಅದೇ ಕೆಳಗಿನ ಮತ್ತೊಂದು ದಾಸರ ಪದವನ್ನು ನೋಡಿ:

ದೀನ ನಾನು ಸಮಸ್ತಲೋಕಕೆ ದಾನಿ ನೀನು
ವಿಚಾರಿಸಲು ಮತಿಹೀನ ನಾನು
ಮಹಾಮಹಿಮ ಕೈವಲ್ಯಪತಿ ನೀನು
ಏನಬಲ್ಲೆನು ನಾನು ನೆರೆ ಸುಜ್ಞಾನಮೂರುತಿ ನೀನು
ನಿನ್ನ ಸಮಾನರುಂಟೇ ದೇವ ರಕ್ಷಿಸು ನಮ್ಮನನವರತ.

ಇದನ್ನು ರಚಿಸಿದ ಕನಕದಾಸರು, ಪುರಂದರದಾಸರ ಸಮಕಾಲೀನರು ಮತ್ತು ಇಬ್ಬರೂ ಒಂದೇ ಗುರುವಿನ ಶಿಷ್ಯರು! ಆದರೆ ಕನಕದಾಸರ ಸುಮಾರು ಎಲ್ಲ ಕೃತಿಗಳೂ ಕ್ಲಿಷ್ಟವಾದ ಮತ್ತು ಹಳೆಗನ್ನಡವನ್ನೊಳಗೊಂಡ ಸಾಹಿತ್ಯವೆಂದು ತೋರುತ್ತವೆ.

ಆಡುಭಾಷೆ ಹೆಚ್ಚು ಬದಲಾವಣೆಯಾಗಿಲ್ಲ ಎಂಬ ವಿಚಾರ ನಮಗೆ ಸ್ಪಷ್ಟವಾಗಿ ಮನವರಿಕೆಯಾಗುವುದು ನಮ್ಮ ಜಾನಪದ ಗೀತೆಗಳಲ್ಲಿ. ನೂರಾರು ವರ್ಷಗಳಿಂದ ಬಾಯಿಂದ ಬಾಯಿಗೆ ಹರಡಿ ತನ್ನ ನವಿರಾದ ಗ್ರಾಮ್ಯ ಸೊಡಗನ್ನು ಉಳಿಸಿಕೊಂಡಿರುವ ನಮ್ಮ ಜಾನಪದ ಪದ್ಯಗಳು ನಿಜಕ್ಕೂ ಕನ್ನಡಿಗರ ಆಡುಭಾಷೆ ಏನೇನೂ ಬದಲಾಗಿಲ್ಲವೆಂಬುದನ್ನು ಎತ್ತಿತೋರುತ್ತವೆ.

೩. ಮುಂಗೋಳಿ ಕೂಗ್ಯಾವು ಮುಗಿಲು ಕೆಂಪೇರ್ಯಾವು।
ಸ್ವಾಮಿ ನನ್ನಯ್ಯ ರಥವೇರಿ ಬರುವಾಗ ನಾನೆದ್ದು ಕೈಯ್ಯ ಮುಗಿದೇನು॥

ಮಕ್ಕಳಾಟವು ಚಂದ, ಮತ್ತೆ ಯವ್ವನ ಚಂದ।
ಮುಪ್ಪಿನಲಿ ಚಂದ ನೆರೆಗಡ್ಡ,
ಜಗದೊಳಗೆ ಎತ್ತ ನೋಡಿದರು ನಗು ಚಂದ॥

ಇವೆಲ್ಲ ಸರಳವಾದ, ಸರ್ವಕಾಲಿಕವಾದ, ಅಳಿವಿಲ್ಲದ ಚೆನ್ನುಡಿಯ ಕನ್ನಡ ಪದಗಳು!

ಒಬ್ಬ ಸಾಹಿತಿ ಅಥವಾ ಕವಿ ತನ್ನ ಸಾಹಿತ್ಯ ರಚನೆಗೆ ಆರಿಸಿಕೊಳ್ಳುವ ಕನ್ನಡ ಹಳೆಗನ್ನಡವೋ, ನಡುಗನ್ನಡವೋ ಅಥವಾ ಹೊಸಗನ್ನಡವೋ ಆಗಿರಬಹುದು. ಆ ಸಾಹಿತ್ಯವನ್ನು ನೋಡಿ ನಾವು ಆ ರಚನಾಕಾರನು ಬರೆದ ಕನ್ನಡ ಭಾಷೆಯನ್ನು ಜನ ಆ ಕಾಲದಲ್ಲಿ ಮಾತನಾಡುತ್ತಿದ್ದರು ಎಂದು ಹೇಳುವುದು ಸರಿಯಲ್ಲ. ೨೦ನೇ ಶತಮಾನದಲ್ಲಿಯೂ ನಂದವಳಿಕೆಯ ಮುದ್ದಣ ರಾಮಾಶ್ವಮೇಧವನ್ನು ಬರೆದದ್ದು ಹಳೆಗನ್ನಡದಲ್ಲಿ. ಅಷ್ಟೇಕೆ ನಮ್ಮ ಕಣ್ಣೆದುರೇ ಇದ್ದ ಕುವೆಂಪು ತಮ್ಮ ರಾಮಾಯಣದರ್ಶನಂಗೆ ಆರಿಸಿಕೊಂಡ ಭಾಷೆ ಯಾವುದು? ತಮ್ಮದೇ ಮಹಾಛಂದಸ್ಸಿನಲ್ಲಿ ನಡುಗನ್ನಡದಲ್ಲಿಯೇ.

'ಸತ್ಪಥಮೆ ದಲ್ ತಂಗೆ! ಸತ್ಪಥಮೆ ಅದು ದಿಟಂ,
ಹೆಂಬೇಡಿಗಳಿಗೆ ಮೇಣ್
ಜೀವಗಳ್ಗೆರಿಗೆ!' ಅರ್ದು ಕುಳಿತನು ದಶಾನನನವನ ಮಂಚಮಂ ನೆಮ್ಮಿ.

ಅಷ್ಟೇಕೆ ಈವತ್ತು ಕೂಡ ಕೊಡಗಿನವರೇ ಆದ ನಮ್ಮ ಪ್ರೊ.ಜಿ.ಟಿ.ನಾರಾಯಣರಾವ್‌ರವರು ಕಂದಪದ್ಯಗಳನ್ನು ಛಂದೋಬದ್ಧವಾಗಿ ಅದೂ ದ್ವಿತೀಯಾಕ್ಷರ ಪ್ರಾಸದೊಂದಿಗೆ, ಬರೆಯುತ್ತಿದ್ದಾರೆ!

ಒಂದು ಲೇಖನ ಉತ್ತಮ ಅಥವಾ ಪ್ರೌಢ ಲೇಖನವೆನಿಸಕೊಳ್ಳಲು ಬರಹಗಾರ ತನ್ನ ಕೃತಿಯಲ್ಲಿ ಹೆಚ್ಚು ಹೆಚ್ಚು ಸಂಸ್ಕೃತ ಪದಗಳನ್ನು ಸೇರಿಸುವುದು ನಾವು ಸಾಮಾನ್ಯವಾಗಿ ಕಾಣುವ ಅಂಶ. ಅಂತಹ ಗದ್ಯ ಒಂದು ವಿದ್ವತ್ ಪೂರ್ಣ ಬರಹ ಎನ್ನಿಸಿಕೊಳ್ಳುತ್ತದೆ. ಕ್ರಿ.ಶ.೧೫೫೦ರಲ್ಲಿ ಬಾಳಿದ ನಿಜಗುಣ ಶಿವಯೋಗಿಯ ಬಗ್ಗೆ ಈ ಪಂಕ್ತಿ ಓದಿ:

"ಕನ್ನಡ ನಾಡಿನ ದಕ್ಷಿಣದ ಅಂಚು; ಚಿಲುಕವಾಡಿಯ ಸಮೀಪದಲ್ಲಿ ಶಂಭುಲಿಂಗನ ಬೆಟ್ಟ, ಅದರಲ್ಲೊಂದು ಗುಹೆ. ಅದರಲ್ಲಿ ಪರಶಿವನಾದ ಶಂಭುಲಿಂಗನ ಸಾನಿಧ್ಯ. ಶಿವನು ಭಸ್ಮೋಧೂಳಿತನಾಗಿ, ಸರ್ಪಭೂಷಣನಾಗಿ, ಬಿಲ್ವ ದ್ರೋಣ ಪುಷ್ಪಗಳಿಂದ ಕಂಗೊಳಿಸುತ್ತಾ, ಸ್ಮಿತವದನನಾಗಿ, ನಾದಮಯನಾಗಿ, ವರದಮುದ್ರೆಯೊಂದಿಗೆ ಅನುಗ್ರಹ ಭಾವದಲ್ಲಿದ್ದಾನೆ. ಗುಹೆಯಲ್ಲಿ ಒಂದು ವ್ಯಾಘ್ರಾಸನ. ಅದರ ಮೇಲೆ ದೇಶಿಕೇಂದ್ರನಾದ ಶಿವಯೋಗಿಯೊಬ್ಬ ಪದ್ಮಾಸನದಲ್ಲಿ ಕುಳಿತಿದ್ದಾನೆ. ಹಣೆಯಲ್ಲಿ ಭಸ್ಮತ್ರಿಪುಂಡ್ರ–ಜ್ಞಾನ ಭಕ್ತಿ ವೈರಾಗ್ಯಗಳ ಸಂಕೇತ......"

ವಾಹ್! ಎಂಥ ವಿದ್ವತ್‌ಪೂರ್ಣ ಬರಹ!

ಕನ್ನಡ ಕವಿ ಆಂಡಯ್ಯ ಹೇಳುವಂತೆ ಅದು ಕಬ್ಬಿಣದ ಕಡಲೆಯಾಗಿರಬಾರದು, 'ಸುಲಿದ ಬಾಳೆಯ ಹಣ್ಣಿನಂದದಿ' ಇರಬೇಕು. ಈಗಂತೂ ನಾಯಿಕೊಡೆಯಂತೆ ಬೆಳೆಯುತ್ತಿರುವ ಕನ್ನಡ ಸಾಹಿತಿ–ಕವಿಗಳು ಅದೆಷ್ಟು ಸಾಹಿತ್ಯ ಕೃಷಿ ಮಾಡುತ್ತಿದ್ದಾರೆಂದರೆ, ಅವರ ಎಷ್ಟೋ ಸಾಹಿತ್ಯಗಳು 'ಸುಲಿದ ಬಾಳೆಯ ಸಿಪ್ಪೆಯಂದದಿ' ಇರುತ್ತವೆ: ಬರೇ ಕಹಿ, ಸಪ್ಪೆ! ಅದಿರಲಿ.

ಭವ್ಯ ಇತಿಹಾಸವುಳ್ಳ ಕನ್ನಡ ಬಹು ವಿಶಾಲವಾಗಿ ಅಷ್ಟೇ ಆಳವಾಗಿ ಬೆಳೆದಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಪ್ರಪಂಚದಲ್ಲಿ ಇನ್ನಾವುದೇ ಭಾಷೆಗೂ ಇಲ್ಲದ ಧ್ವನಿ ಭಂಡಾರ ಮತ್ತು ಅಕ್ಷರ ಭಂಡಾರವೇ ಕನ್ನಡದ ಆಸ್ತಿ. ಮುಂದೇನು? ಎಂದಾಗ ಕನ್ನಡಕ್ಕೆ ಇನ್ನೂ ಭವ್ಯವಾದ ಭವಿಷ್ಯವಿದೆ ಎಂದು ಸಂಭ್ರಮದಿಂದ ಹೇಳಬಹುದು.

ಹೇಳಿ–ಕೇಳಿ ಇದು ಕಂಪ್ಯೂಟರ್ ಯುಗ. ಕಂಪ್ಯೂಟರ್ ಬಳಕೆ ಇವತ್ತು ಎಲ್ಲಾ ಕ್ಷೇತ್ರಗಳಲ್ಲಿಯೂ ಅನಿವಾರ್ಯ ಅವಶ್ಯಕ ಆಗಿಬಿಟ್ಟಿದೆ. ದಿನ ಪತ್ರಿಕೆಗಳು, ವಾರಪತ್ರಿಕೆಗಳು, ಮಾಸಿಕಗಳು, ಮುಂತಾದ ನಿಯತಕಾಲಿಕಗಳೊಂದಿಗೆ ಪ್ರತಿದಿನ ಹೊಸ ಹೊಸ ಪ್ರಕಾಶನಗಳು, ಹೊಸ ಹೊಸ ಪುಸ್ತಕಗಳು ಬೆಳಕಿಗೆ ಬರುತ್ತಿವೆ. ಲಕ್ಷಾಂತರ ಮಂದಿ ಕನ್ನಡಿಗರು ಸಾಹಿತ್ಯಕೃಷಿಗೆ ಕೈ ಹಾಕಿದ್ದಾರೆ.

ಮುದ್ರಣ ಮಾಧ್ಯಮ ತೀವ್ರ ಗತಿಯಲ್ಲಿ ಮುನ್ನಡೆದಂತೆ ಹೇರಳವಾಗಿ ಹೆಚ್ಚುತ್ತಿರುವ ನಿಯತಕಾಲಿಕಗಳು, ಲೇಖನಗಳು, ಕಥೆ–ಕಾದಂಬರಿಗಳು, ಇನ್ನಿತರ ಪುಸ್ತಕಗಳು, ಮುಂತಾದವುಗಳ ಫಲವಾಗಿ ಇಂದು ಲೇಖಕರ–ಕವಿಗಳ ಸಂಖ್ಯಾ ಬಾಹುಳ್ಯವೂ ಕನ್ನಡಕ್ಕೆ ಸೇರ್ಪಡೆಗೊಂಡಿದೆ. ಈ ನಿಟ್ಟಿನಲ್ಲಿ ನಾವು ನೋಡಿದಾಗ, ಪ್ರಚಲಿತ ವಿದ್ಯಮಾನದಲ್ಲಿ ಕನ್ನಡ ಭಾಷೆಯ ಅಕ್ಷರಮಾಲೆ ವರ್ತಮಾನ ಸಾಹಿತ್ಯ ಪ್ರಕಾರಗಳಲ್ಲಿ

ಸಮರ್ಥವಾದ ಆಸರೆ ನೀಡುತ್ತಿದೆಯೇ ಎಂಬುದನ್ನು ನಾವು ಪುನರ್ ವಿಮರ್ಶಿಸುವ ಸಂದರ್ಭ ಬಂದಿದೆ ಎಂದು ನನಗೆ ಅನ್ನಿಸುತ್ತದೆ.

ಹಿಂದೆ ಪ್ರೆಸ್‌ಗಳಲ್ಲಿ ಒಂದು ಕನ್ನಡ ಲೇಖನವನ್ನು ಅಚ್ಚಿಗೆ ಜೋಡಿಸಲು ಬಹಳ ಕಷ್ಟವಿತ್ತು. ಅಚ್ಚು ಮೊಳೆಗಳನ್ನು ಒಂದೊಂದೇ ಜೋಡಿಸಬೇಕು. ಇಂಗ್ಲೀಷಿನಲ್ಲಾದರೆ ಬರೆ ೨೬ ಮೊಳೆಗಳು. ಆದರೆ ಕನ್ನಡದಲ್ಲಿ ತಲೆಕಟ್ಟು, ಕೊಂಬು, ಈಳಿ, ಒತ್ತಕ್ಷರ ಎಲ್ಲ ಸೇರಿ ನೂರಕ್ಕೂ ಹೆಚ್ಚು ಮೊಳೆಗಳು! ಇದರ ಜೊತೆಗೆ ತಪ್ಪೊಪ್ಪು, ಹೊಸ ತಪ್ಪುಗಳು, ಮುದ್ರಾರಾಕ್ಷಸನ ಹಾವಳಿ, ಇವುಗಳಿಂದ ಬಹಳಷ್ಟು ಸಮಯ, ಶ್ರಮ ವ್ಯರ್ಥವಾಗುತ್ತಿತ್ತು. ಈಗ ಕಂಪ್ಯೂಟರ್ ಬಳಕೆ ವ್ಯಾಪಿಸಿ ಇದರಿಂದ ಪ್ರಿಂಟಿಂಗ್ ಬಹಳ ಸುಲಭವಾಗಿದೆ. ಕನ್ನಡದಲ್ಲಿಯೂ ನೂರಾರು ಅಕ್ಷರವಿನ್ಯಾಸಗಳಿದ್ದು, ಅಚ್ಚುಕಟ್ಟಾದ, ಆಕರ್ಷಕವಾದ ಸಾಹಿತ್ಯವನ್ನು ಕಾಗದದ ಮೇಲೆ ನಾವು ಕಾಣುವಂತಾಗಿದೆ.

ಇದರೊಂದಿಗೆ ಒಂದು ಲಿಪಿಯನ್ನು ಮತ್ತೊಂದು ಲಿಪಿಗೆ ಬದಲಾಯಿಸಲು 'ಲಿಪ್ಯಂತರ ತಂತ್ರಾಂಶ'ಗಳೂ ಬಂದಿವೆ. ಇದನ್ನು Transliteration ಎನ್ನುತ್ತಾರೆ. ಇದು Translation –ಭಾಷಾಂತರ–ಅಲ್ಲ. ಉದಾ: ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಎಂದು ಕನ್ನಡದಲ್ಲಿ Type ಮಾಡಿ, ಅದನ್ನು ಹಿಂದಿ ಲಿಪಿಗೆ ಲಿಪ್ಯಂತರ ಬಹು ಸುಲಭವಾಗಿ ಮಾಡಬಹುದು. ಅದನ್ನೇ ಒರಿಯಾ, ಮಲಯಾಳ ಅಥವಾ ತೆಲುಗಿಗೆ ಅಷ್ಟೇ ಸುಲಭವಾಗಿ ಬದಲಾಯಿಸಬಹುದು. ಹಲವು ವರ್ಷಗಳಿಂದ ಈ ತಂತ್ರಾಂಶಗಳನ್ನು ನಾವೆಲ್ಲ ಬಳಸುತ್ತಿದ್ದೇವೆ.

ಕಂಪ್ಯೂಟರ್ ತಾಂತ್ರಿಕತೆ ಅಭಿವೃದ್ಧಿ ಹೊಂದಿದಂತೆ ಎಲ್ಲ ಭಾಷೆಗಳಲ್ಲಿಯೂ ಹೊಸ ಹೊಸ ತಂತ್ರಾಂಶಗಳ ಸೇರ್ಪಡೆಯೂ ಆಗುತ್ತಿದೆ. ಈ ನಿಟ್ಟಿನಲ್ಲಿ ನಾವು ಇಂಗ್ಲೀಷ್ ಭಾಷೆಯಲ್ಲಿ ಸುಮಾರು ಹದಿನೈದು–ಹದಿನಾರು ವರ್ಷಗಳಿಂದ ಪ್ರಗತಿ ಸಾಧಿಸಿರುವ Voice Recognition ತಂತ್ರಾಂಶವನ್ನು ಕಾಣುತ್ತಿದ್ದೇವೆ. ಇದನ್ನು Transphonetic Litaration ಅಥವಾ ಕನ್ನಡದಲ್ಲಿ 'ಧ್ವನಿ ಲಿಪ್ಯಂತರ' ತಂತ್ರಾಂಶ ಎನ್ನಬಹುದು. ಇದರಲ್ಲಿ ಒಬ್ಬ ವ್ಯಕ್ತಿ ಮೈಕ್ರೋಫೋನ್‌ನಲ್ಲಿ ಹೇಳಿದ ಧ್ವನಿತರಂಗಗಳನ್ನು ಕಂಪ್ಯೂಟರ್ ಗ್ರಹಿಸಿ ಅದನ್ನು ಅಕ್ಷರ ರೂಪದಲ್ಲಿ ಬರೆಯುವುದು.

ಇಂಗ್ಲೀಷಿನಲ್ಲಿ ಈ ತಂತ್ರಾಂಶವನ್ನು ರೂಪಿಸುವುದು Software Engineer ಗಳಿಗೆ ಅತಿ ಕ್ಲಿಷ್ಟವಾದ ಕಾರ್ಯ. ಏಕೆಂದರೆ, ಇಂಗ್ಲೀಷಿನಲ್ಲಿ ನಾವು ಉಚ್ಚರಿಸುವುದು ಒಂದಾದರೆ, ಬರವಣಿಗೆಯಲ್ಲಿ ಬರೆಯುವುದೇ ಬೇರೆ. ಅಲ್ಲದೆ ಒಂದೇ ಪದವನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ರೀತಿ ಉಚ್ಚರಿಸುತ್ತೇವೆ. ಇವೆಲ್ಲವನ್ನೂ ಕಂಪ್ಯೂಟರ್ ಗ್ರಹಿಸಿ ಸಂದರ್ಭಕ್ಕೆ ತಕ್ಕಂತೆ ಬರೆಯಬೇಕು. ಇನ್ನೂ ಪ್ರಗತಿಯಲ್ಲಿರುವ ಈ ಅಮೋಘ ಕಾರ್ಯ ಈವತ್ತು ಶೇಕಡ ೯೮ ರಷ್ಟು ನಿಖರತೆ ಪಡೆದಿದೆ.

ಈ ತಂತ್ರಾಂಶ ಹೇಗೆ ಕೆಲಸ ಮಾಡುತ್ತದೆ ಎಂದು ಒಂದು ಚಿಕ್ಕ ಉದಾಹರಣೆಯೊಂದಿಗೆ ಹೇಳುತ್ತೇನೆ. ಇಂಗ್ಲೀಷಿನಲ್ಲಿ "I am going to Msyore" ಎಂದು ಹೇಳಿದ್ದೀರಿ. ಇದನ್ನು ಕಂಪ್ಯೂಟರ್ ಅಕ್ಷರದಲ್ಲಿ ಬರೆಯಬೇಕಾದಲ್ಲಿ ನೀವು ಹೇಳಿದ ಧ್ವನಿಗಳನ್ನು ಮೊದಲು ಗುರುತು ಹಿಡಿಯಬೇಕು. ಈ ವಾಕ್ಯದಲ್ಲಿ ಮೊದಲ ಪದ, I. ಇದು ಬಹಳ ಸುಲಭ; ಏಕೆಂದರೆ I ಎಂಬ ಒಂದು ಅಕ್ಷರವೇ ಇಂಗ್ಲೀಷ್

ವರ್ಣಮಾಲೆಯಲ್ಲಿದೆ. ಅದನ್ನು ಬರೆದ ನಂತರ ಎರಡನೆಯ ಪದ, am. ಇಲ್ಲಿ ಆ ಮತ್ತು ಮ್ ಎರಡನ್ನೂ ಸೇರಿಸಿ ಬರೆಯಬೇಕು. ಮುಂದಿನದು going. ಗ್ ಮತ್ತು ಓ=go, ಇನ್ನು ing ಎನ್ನುವುದು ಒಂದು Suffix. ಮುಂದಿನದು to : ಇಲ್ಲಿ ಕಂಪ್ಯೂಟರ್ ತಡವರಿಸುತ್ತದೆ. ಟು ಎಂದರೆ ಯಾವ ಟು? To,Too,Two? ಸಂದರ್ಭವನ್ನು ಗ್ರಹಿಸಿಕೊಳ್ಳಬೇಕು, ನಂತರ ಬಹುಶಃ ಇದು to ಇರಬೇಕು ಎಂದು ಊಹಿಸಿ ಅಚ್ಚಿಸಬೇಕು. ಕೊನೆಯ ಪದ Msyore: ಬಹುಶಃ ಈ ತಂತ್ರಾಂಶವನ್ನು ಬರೆದ ಪಾಶ್ಚಾತ್ಯ ಇಂಜಿನಿಯರ್ ವಾಶಿಂಗ್‌ಟನ್, ಕ್ಯಾಲಿಫೋರ್ನಿಯಾ, ಅಥವಾ ಲಂಡನ್, ಮುಂತಾದ ಸ್ಥಳಗಳನ್ನು ಹೇಳಿಕೊಟ್ಟಿರುತ್ತಾನೆಯೇ ವಿನಃ ಮೈಸೂರು, ಮಡಿಕೇರಿ, ಮುಂತಾದ ಪದಗಳನ್ನು ಕಂಪ್ಯೂಟರ್‌ಗೆ ಅಳವಡಿಸಿರುವುದಿಲ್ಲ. ಆದ್ದರಿಂದ 'ಮೈಸೂರ್' ಎನ್ನುವಲ್ಲಿ ಆ ಗಣಕಯಂತ್ರ ಏನೋ ಆಪದ್ಧ ಬರೆಯುತ್ತದೆ. ಅದನ್ನು ಸರಿಪಡಿಸಿ, Msyore ಎಂದು ಪುನಃ ಉಚ್ಚರಿಸಿ, ಈ ಹೊಸ ಪದವನ್ನು ಕಂಪ್ಯೂಟರ್‌ನ ಮೆದುಳಿಗೆ ತುಂಬಬೇಕು.

ಹೀಗೆ ಆ ತಂತ್ರಾಂಶದಲ್ಲಿ ಇಂಗ್ಲೀಷ್ ಭಾಷೆಯ ಸಂಪೂರ್ಣ ನಿಘಂಟನ್ನು ಮೊದಲಿಗೆ ಕಂಪ್ಯೂಟರ್‌ನ ನೆನಪಿನ ಭಂಡಾರದಲ್ಲಿಟ್ಟು, ಅದರಲ್ಲಿನ ಒಂದೊಂದು ಪದವೂ ಸಾಮಾನ್ಯವಾಗಿ ಹೇಗೆ ಉಚ್ಚರಿಸಲ್ಪಡುತ್ತದೆ ಎಂಬ ವಿಚಾರವನ್ನು ಒಂದೊಂದಾಗಿ ಅದರ ನೆನಪಿಗೆ ತುಂಬಬೇಕು. ಅಲ್ಲಿಂದ ಮತ್ತೊಬ್ಬ ವ್ಯಕ್ತಿ ಆ ಭಂಡಾರದಲ್ಲಿರುವ ಯಾವುದೇ ಪದವನ್ನು ಉಚ್ಚರಿಸಿದರೂ ಕಂಪ್ಯೂಟರ್ ಆ ಧ್ವನಿ ತರಂಗಗಳನ್ನು ಗ್ರಹಿಸಿ, ಅದಕ್ಕೆ ಯವ ಅಕ್ಷರ ಜೋಡಣೆ ಹೊಂದುತ್ತದೆ ಎಂದು ತುಲನೆ ಮಾಡಿ ಆ ಪದವನ್ನು ಬರೆಯುತ್ತದೆ. ಇಂಗ್ಲೀಷಿನಲ್ಲಿ ಈ ತಂತ್ರಾಂಶವನ್ನು ತಯಾರಿಸಲು ಎಷ್ಟೊಂದು ಕ್ಲಿಷ್ಟ ಮತ್ತು ಈ ಕಾರ್ಯ ಎಷ್ಟು ಸಂಕೀರ್ಣತೆಯಿಂದ ಕೂಡಿದೆ ಈಗ ನಿಮಗೆ ಅರ್ಥವಾಗಿರಬಹುದು. ಹೀಗಿದ್ದೂ ಅದರ ನಿಖರತೆ, ಶೇಕಡ ೯೮; ಆದರೆ ಖಂಡಿತವಾಗಿಯೂ ಶೇಕಡ ನೂರಕ್ಕೆ ನೂರು ಅಲ್ಲ!

ಈಗ ಕನ್ನಡಕ್ಕೆ ಬನ್ನಿ! ಕನ್ನಡದಲ್ಲಿ ನಾವು ಏನು ಉಚ್ಚರಿಸುತ್ತೇವೋ ಅದನ್ನೇ ಲಿಪಿಯಲ್ಲಿ ಬರೆಯುತ್ತೇವೆ. ಮೈಕ್ರೋಫೋನಿನಲ್ಲಿ ಹೇಳಿದ ಗಣಕಯಂತ್ರ ಗ್ರಹಿಸಿ ಅದನ್ನು ನೇರವಾಗಿ ಅಕ್ಷರರೂಪಕ್ಕೆ ಲಿಪ್ಯಂತರಿಸುವುದು ಬಹಳ ಸುಲಭ ಸಾಧ್ಯವಾದ ಕೆಲಸ. ಮೇಲಿನ ಉದಾಹರಣೆಯನ್ನೇ ತೆಗೆದುಕೊಳ್ಳೋಣ. "ನಾನು ಮೈಸೂರಿಗೆ ಹೋಗುತ್ತಿದ್ದೇನೆ" ಇಲ್ಲಿ ಮೊದಲ ಪದ, ನಾನು ವನ್ನು ಇನ್ನು ಹೇಗೂ ಉಚ್ಚರಿಸಲು ಸಾಧ್ಯವಿಲ್ಲ. ಅದನ್ನು ಯಾರು ಹೇಳಿದರೂ ಅದು 'ನಾನು'! ಇನ್ನು ಮೈಸೂರಿಗೆ– ಎಂದರೆ ಕಂಪ್ಯೂಟರ್ 'ಇದು ಯಾವ ಊರು?'ಎಂದು ಕೇಳುವಂತಿಲ್ಲ. ಹೇಳಿದ್ದನ್ನು ಹೇಳಿದ ಹಾಗೆ ಬರೆದುಕೊಂಡು ಹೋಗುತ್ತದೆ. ನನಗೆ ಗೊತ್ತಿಲ್ಲ ಎನ್ನುವಂತಿಲ್ಲ. ನಿಘಂಟಿನ ಅವಶ್ಯಕತೆಯಿಲ್ಲ! ಶೇಕಡ ನೂರಕ್ಕೆ ನೂರರಷ್ಟು ಕರಾರುವಕ್ಕಾದ ಪದ್ಧತಿ! ಇಂತಹ ತಂತ್ರಾಂಶವನ್ನು ಒಂದು ಸಾರಿ ಕನ್ನಡದಲ್ಲಿ ರೂಪಿಸಿಬಿಟ್ಟರೆ, ಭಾರತದ ಎಲ್ಲ ಭಾಷೆಗಳಿಗೂ ಅನುಕೂಲ,ಅಲ್ಲದೆ ಪ್ರಪಂಚದ ಯಾವುದೇ ಭಾಷೆಯನ್ನೂ ಈ ತಂತ್ರಾಂಶಕ್ಕೆ ಅಳವಡಿಸಬೇಕು.

ಉದಾಹರಣೆಗೆ ಒಬ್ಬ ಬಂಗಾಳಿ ಲೇಖಕ ಬಂಗಾಳಿ ಭಾಷೆಯಲ್ಲಿ ಒಂದು

ಲೇಖನವನ್ನು ಬರೆಯಬೇಕಾದಲ್ಲಿ ಈ ಕನ್ನಡ ಧ್ವನಿಲಿಪ್ಯಂತರ ತಂತ್ರಾಂಶವನ್ನು ಬಳಸಿ, ಮೊದಲಿಗೆ ಲಿಪಿಯನ್ನು 'ಬಂಗಾಳಿ' ಎಂದು ಕಂಪ್ಯೂಟರ್‌ಗೆ ನಿರ್ದೇಶಿಸಿ, ಅಲ್ಲಿಂದ ಮುಂದೆ ತನ್ನ ಭಾಷೆಯಲ್ಲಿ ಹೇಳುತ್ತಾ ಹೋದರೆ, ಯಾವುದೇ ಅಡತಡೆಯಿಲ್ಲದೆ ಬಂಗಾಳಿ ಭಾಷೆಯಲ್ಲಿಯೇ ಕೃತಿಯನ್ನು ರಚಿಸಬಹುದು. ಇದನ್ನೇ ಒಬ್ಬ ಮಲೆಯಾಳಿಯೂ ಮಾಡಬಹುದು. ತಂತ್ರಾಂಶ ಕನ್ನಡದ್ದಾದ್ದರಿಂದ ಅದನ್ನು ಬಳಸಿ ಯಾವ ಭಾಷೆಯಲ್ಲಿ ಬೇಕಾದರೂ ಬರವಣಿಗೆಯಲ್ಲಿ ಸಿದ್ಧಪಡಿಸಬಹುದು. ಇದು ಕನ್ನಡದ ಅತಿಶಯ ವಿಶೇಷತೆಯಲ್ಲದೆ ಮತ್ತಿನ್ನೇನು?

ಅದ್ದರಿಂದ ನಾವು ಈವತ್ತು ಒಂದು ತೀರ್ಮಾನಕ್ಕೆ ಬರಬಹುದು.

"ಇಂದು ಪ್ರಪಂಚದಲ್ಲಿ ಪ್ರಚಲಿತವಿರುವ ಭಾಷೆಗಳಲ್ಲೆಲ್ಲ ಅತ್ಯಂತ ವೈಜ್ಞಾನಿಕ ತಳಹದಿಯ ಮೇಲೆ ರಚನೆಯಾದ, ಗಣಕ ತಾಂತ್ರಿಕತೆಗೆ ಅತ್ಯಂತ ಸರಳವೂ, ಪೂರಕವೂ ಆದ ಮತ್ತು ಎಲ್ಲಕ್ಕಿಂತಲೂ ಅತಿಶಯವಾಗಿ ಪರಿಪೂರ್ಣವಾದ ಭಾಷೆ ನಮ್ಮ ಕನ್ನಡ!"

ಇದನ್ನು ನಾನು ಕನ್ನಡ ಭಾಷೆಯ ಮೇಲಿನ ಅಭಿಮಾನದಿಂದಾಗಲೀ, ಈ ನೆಲದ ಮಣ್ಣಿನ ಋಣಭಾರ ಕಡಿಮೆಯಾಗಲಿ ಎಂದಾಗಲೀ ಹೇಳುತ್ತಿರುವ ಮಾತಲ್ಲ. ಕನ್ನಡಕ್ಕೆ ಈ ಒಂದು ಅದ್ಭುತವಾದ ಉನ್ನತ ಸ್ಥಾನ ಇರುವುದು ನೂರಕ್ಕೆ ನೂರು ಸತ್ಯ.

ಪ್ರಪಂಚದ ಎಲ್ಲಾ ಭಾಷಾ ವಿಜ್ಞಾನಿಗಳೂ ಈ ಬಗ್ಗೆ ಆಲೋಚಿಸಬೇಕು. ಕನ್ನಡ ಬಲ್ಲವರಿಗೆ ಇದು ಮನವರಿಕೆಯಾಗಬೇಕು. ಕನ್ನಡಿಗರು ಈ ವಿಷಯವನ್ನು ಎಲ್ಲೆಡೆ ಸಾರಬೇಕು. ಕನ್ನಡನಾಡಿನ ಗಣಕಯಂತ್ರ ಮತ್ತು ತಂತ್ರಾಂಶ ಇಂಜಿನಿಯರ್‌ಗಳು ಈ ಬಗ್ಗೆ ಹೆಚ್ಚಿನ ಆಸಕ್ತಿಯಿಂದ ಕಾರ್ಯತತ್ಪರರಾಗಬೇಕು.


ಕನ್ನಡಕ್ಕೆ ಶಾಸ್ತ್ರೀಯ ಸ್ಥಾನ ಸಿಗಬೇಕೆಂಬ ಆಂದೋಲನ ನಡೆದಿದೆ. ಇದನ್ನು ನಾವು ಕಲಿತದ್ದು ತಮಿಳರಿಂದ. ಅಲ್ಲಿಯವರೆಗೂ ಅಂತಹ ಒಂದು ಸ್ಥಾನವಿದೆಯೆಂದೇ ನಮಗೆ ತಿಳಿದಿರಲಿಲ್ಲ! ರಾಷ್ಟ್ರಕವಿ ಕುವೆಂಪುರವರು "ಬಾರಿಸು ಕನ್ನಡ ಡಿಂಡಿಮವ" ಎಂದು ಕರೆಯಿತ್ತಿದ್ದಾರೆ. ನಾವು ಹಲವು ದಶಕಗಳಿಂದ ಡಿಂಡಿಮವನ್ನು ಬಾರಿಸುತ್ತಲೇ ಇದ್ದೇವೆ. ಆದರೆ, ತಮಿಳರು 'ಬೊಂಬಡ' ಬಾರಿಸುತ್ತಾರೆ ಮತ್ತು ಬೇಕಾದ್ದನ್ನು ಸಾಧಿಸುತ್ತಾರೆ! ಶಾಸ್ತ್ರೀಯ ಸ್ಥಾನ ಕನ್ನಡಕ್ಕೆ ದೊರಕಲಿ. ಅದಕ್ಕೂ ಮಿಗಿಲಾದ ಸ್ಥಾನ ಕನ್ನಡಕ್ಕೆ ಸ್ವಾಭಾವಿಕವಾಗಿಯೇ ಇದೆ. ಎಂಬುದನ್ನು ಹೇಳಲು ನಾನು ಪ್ರಯತ್ನಿಸಿದ್ದೇನೆ.

ಕನ್ನಡ ಭಾಷೆಯ ಎತ್ತರ, ಅದರ ಗಟ್ಟಿತನ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಅದರ ಉಪಯುಕ್ತತೆ ಇವೆಲ್ಲ ಪ್ರಪಂಚದಾದ್ಯಂತ ಹರಡಬೇಕು. ಸಾವಿರದ ಇನ್ನೂರು. ವರ್ಷಗಳ ಹಿಂದೆ ನೃಪತುಂಗ ಮಹಾರಾಜ ಇದನ್ನು ಊಹಿಸಿದ್ದನೋ ಇಲ್ಲವೋ "ವಸುಧಾವಲಯ ವಿಲೀನ ವಿಶದ ವಿಷಯ ವಿಶೇಷಂ"– ಎಂದು ಹೇಳಿದ ಮಾತು ಇಂದು ಸತ್ಯವಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಕನ್ನಡಕ್ಕೆ ಆ ಸ್ಥಾನ ಸಿಗಲಿ, ಈ ನಿಟ್ಟಿನಲ್ಲಿ ನಾವೆಲ್ಲ ಪ್ರಯತ್ನಿಸೋಣ.

* * *

ಜನಪದ ವ್ಯಕ್ತಿ

ಸತ್ಯವ್ರತ



ಸುಮಾರು ನಲವತ್ತು ವರ್ಷಗಳಿಂದ ಒಂದೇ ನಿಷ್ಠೆಯಿಂದ, ಒಂದೇ ತನ್ಮಯತೆಯಿಂದ ಸರ್ವೋದಯ ಸಿದ್ಧಾಂತದ ಬಗ್ಗೆ ಚಿಂತನೆ ನಡೆಸಿದ, ಆ ಚಿಂತನೆಯ ಫಲಸ್ವರೂಪವಾಗಿ ಅಸಂಖ್ಯಾತ ಲೇಖನಗಳನ್ನು ಬರೆದ, ಅಸಂಖ್ಯಾತ ಭಾಷಣಗಳನ್ನು ಮಾಡಿದ ವ್ಯಕ್ತಿ ಸಮಸ್ತ ಕರ್ನಾಟಕದಲ್ಲಿ ಯಾರಾದರೂ ಆಗಿ ಹೋಗಿದ್ದರೆ ಅವರು ಸತ್ಯವ್ರತರಲ್ಲದೆ ಬೇರಿನ್ನಾರೂ ಅಲ್ಲ.

ಕೇವಲ ನಾಲ್ಕು ಅಡಿ ಎತ್ತರದ, ತೆಳ್ಳನೆ ಶರೀರದ, ಗೋಧಿ ಬಣ್ಣದ, ಬಿಳಿ ಕೂದಲಿನ, ಕುರುಚಲು ಗಡ್ಡದ, ಇಸ್ತ್ರಿ ಇಲ್ಲದ ಬಿಳಿ ಖಾದಿ ಪೈಜಾಮಾ-ಕುರ್ತಾ ಧರಿಸಿದ, ಹೆಗಲ ಮೇಲೆ ಸದಾ ಜೋತುಬಿದ್ದ ಖಾದಿ ಚೀಲ ಹಾಕಿಕೊಂಡ ಸತ್ಯವ್ರತರನ್ನು ನೋಡಿದರೆ ಇವನೊಬ್ಬ ಏನೂ ವಿಚಾರ ತಿಳಿಯದ ಮುಗ್ಧ ಪ್ರಾಣಿ ಎಂದು ಉದಾಸೀನಕ್ಕೊಳಗಾಗುವ ಸಾಧಾರಣ ವ್ಯಕ್ತಿತ್ವದ ಸತ್ಯವ್ರತ, ಆಂತರ್ಯದಲ್ಲಿ ಬಹು ಭಿನ್ನವಾದ ಜೀವಿ. ಸದಾ ಚಿಂತನ ಶೀಲ, ಅಧ್ಯಯನ ಶೀಲ. ಗಾಂಧೀ-ವಿನೋಬಾ-ಜೆ.ಪಿ ವಿಚಾರಗಳ ಬಗ್ಗೆ ಅಧಿಕಾರಯುತವಾಗಿ ಮಾತನಾಡಬಲ್ಲ ಸರ್ವೋದಯ ಕಾರ್ಯಕರ್ತ. ಸರ್ವೋದಯ ವಿಚಾರವನ್ನು ಯಾರಾದರೂ ತಪ್ಪಾಗಿ ಅರ್ಥೈಸಿದರೆ ಅದನ್ನು ತಕ್ಷಣವೇ ಖಂಡಿಸುವ ಧಾರ್ಷ್ಟತೆ ಅವರಲ್ಲಿತ್ತು. ಲೇಖನ ಬರೆಯಲು ಕುಳಿತರೆ ಹಾಳೆಗಳ ರಾಶಿಯೇ ಉಂಟಾಗುತ್ತಿತ್ತು, ಮಾತನಾಡಲು ಪ್ರಾರಂಭಿಸಿದರೆ ಗಡಿಯಾರದ ಮುಳ್ಳುಗಳು ಸುತ್ತುವರಿಯುತ್ತಲೇ ಇರುತ್ತಿದ್ದವು, ಇವರ ವಿಚಾರ ಪೂರ್ಣ ಭಾಷಣ ನಡೆಯುತ್ತಲೇ ಇರುತ್ತಿತ್ತು. ಸತ್ಯವ್ರತರ ಭಾಷಣವೆಂದರೆ, ಅವರ ಲೇಖನವೆಂದರೆ ಪಿ.ಎಚ್.ಡಿ.ಗಾಗಿ ಸಿದ್ಧ ಪಡಿಸಿದಂತಿರುತ್ತಿದ್ದವು. ಆದರೆ ಸ್ವತಃ ಸತ್ಯವ್ರತ ಯಾವ ಪಿ.ಎಚ್.ಡಿ.ಯನ್ನೂ ಪಡೆದಿರಲಿಲ್ಲ. ಆ ದೃಷ್ಟಿಯಿಂದ ಅಧ್ಯಯನ ಮಾಡಿದವರೂ ಅಲ್ಲ, ಬರೆದವರೂ ಅಲ್ಲ. ಅಧ್ಯಯನಶೀಲತೆ ಅವರ ಹುಟ್ಟುಗುಣವಾಗಿತ್ತು. ಗಾಂಧೀ-ಸರ್ವೋದಯ ವಿಚಾರವಾಗಿ ಮಾತನಾಡುವುದೆಂದರೆ ಅವರಿಗೆ ಎಲ್ಲಿಲ್ಲದ ಉತ್ಸಾಹ. ತಮ್ಮ ಆರೋಗ್ಯವನ್ನೂ ಲೆಕ್ಕಿಸದೆ ಹೆಗಲಿಗೆ ಚೀಲ ಏರಿಸಿ ಆಹ್ವಾನವಿತ್ತವರ ಬಳಿ ಧಾವಿಸುತ್ತಿದ್ದರು. ಎಂದೂ ಪ್ರಚಾರ ಬಯಸಿದವರಲ್ಲ, ಗೌರವ-ಸನ್ಮಾನ ಇತ್ಯಾದಿ ನಿರೀಕ್ಷಿಸಿದವರಲ್ಲ. ಫಲಾಪೇಕ್ಷೆಯಿಲ್ಲದೆ ಸರ್ವೋದಯ ವಿಚಾರದ ಸೇವೆ ಅವರ ಜೀವನದ ಮಂತ್ರವಾಗಿತ್ತು. ಸರ್ವೋದಯ ವಿಚಾರ ಪ್ರಚಾರಕ್ಕಾಗಿ ಕರ್ನಾಟಕದ ಹಳ್ಳಿಗಳನ್ನು ಮಾತ್ರವಲ್ಲ ಮಹಾರಾಷ್ಟ್ರ ಮತ್ತು ದಕ್ಷಿಣ ಭಾರತದ ಹಳ್ಳಿಗಳಲ್ಲೆಲ್ಲ ಪಾದಯಾತ್ರೆ ಮಾಡಿದ ತ್ರಿವಿಕ್ರಮ, ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ನಿರರ್ಗಳವಾಗಿ, ಅಸ್ಖಲಿತವಾಗಿ ಮಾತನಾಡುವ ಸಾಮರ್ಥ್ಯ ಹೊಂದಿದ್ದ ಸತ್ಯವ್ರತ ಎಂಥದೇ ಸನ್ನಿವೇಶದಲ್ಲಿ ತಮ್ಮ ತರ್ಕಬದ್ಧ ವಿಚಾರಗಳನ್ನು ಮಂಡಿಸಿ ಸಭಿಕರ ಮೆಚ್ಚುಗೆ ಪಡೆಯುವ ಧೀಮಂತ.

ಕರ್ನಾಟಕ ಸರ್ವೋದಯ ಮಂಡಲದ ಅಧ್ಯಕ್ಷರಾಗಿದ್ದಾಗ ಮಂಡಳಿಯ ಮುಖಪತ್ರ ಸರ್ವೋದಯ ವಾಹಿನಿಯ ಸಂಪಾದಕರಾಗಿ ಯಾವ ಸಂಚಿಕೆಯ

ಪ್ರಕಟಣೆಗೂ ಚ್ಯುತಿ ಬಾರದಂತೆ ಲೇಖನಗಳನ್ನು ಬರೆದು ಸರ್ವೋದಯ ಆಂದೋಲನದ ಮಾಹಿತಿಯನ್ನು ಸಂಪಾದಿಸಿ ಪ್ರಕಟಿಸುತ್ತಿದ್ದ ಸತ್ಯವ್ರತರು ಪತ್ರಿಕೋದ್ಯಮದ ಯೋಗಿ. ಪತ್ರಿಕೆಯ ಸಂಪಾದನೆಯ ಕೆಲಸವನ್ನಷ್ಟೇ ಅಲ್ಲ ಪತ್ರಿಕೆಗೆ ಚಂದಾದಾರರನ್ನೂ ಕಲೆಹಾಕುವ ಕೆಲಸವನ್ನೂ ಮರೆಯದಲೇ ಮಾಡುತ್ತಿದ್ದರು. ಯಾವುದೇ ಸಭೆಗೆ ಹೋಗಲಿ, ಶಾಲಾ-ಕಾಲೇಜುಗಳಿಗೆ ಹೋಗಲಿ, ಪಾದಯಾತ್ರೆಗೆ ಹೋಗಲಿ ತಮ್ಮ ಹೆಗಲು ಚೀಲದಲ್ಲಿ ಚಂದಾ ರಶೀದಿ ಪುಸ್ತಕ ತೆಗೆದುಕೊಂಡು ಹೋಗಲು ಮರೆಯುತ್ತಿರಲಿಲ್ಲ. ನಿರ್ಭಿಡೆಯಿಂದ ಪತ್ರಿಕೆಗೆ ಚಂದಾ ಮಾಡಿಸುತ್ತಿದ್ದರು. ಸರ್ವೋದಯ ವಾಹಿನಿ ಪಾಕ್ಷಿಕ ಹೊರಡಿಸುವ ಅವರ ಕ್ರಿಯೆಯ ಮೇಲೆ ಗಾಂಧೀಜಿಯವರ ಪತ್ರಿಕೋದ್ಯಮದ ಪ್ರಭಾವ ತುಂಬ ಬೀರಿದ್ದರ ಸಂಕೇತಗಳು ಸ್ಪಷ್ಟವಾಗಿ ಕಾಣಬರುತ್ತಿದ್ದವು. ಪ್ರಕಟಣೆಯಲ್ಲಿ ನಿಯಮಿತತೆ, ಲೆಕ್ಕಾಚಾರದಲ್ಲಿ ಪರಿಶುದ್ಧತೆ, ವಿಷಯಗಳಲ್ಲಿ ಪ್ರಾಮಾಣಿಕತೆ ಅವರ ಪತ್ರಿಕೋದ್ಯಮದ ವಿಶೇಷತೆಗಳು.

ಸತ್ರವ್ರತರು ಸ್ವತಃ ತಮ್ಮ ವಿಚಾರಗಳನ್ನಾಧರಿಸಿದ ಅನೇಕ ಲೇಖನಗಳನ್ನು ಬರೆದುದಲ್ಲದೆ, ಇಂಗ್ಲಿಷ್ ಮತ್ತು ಹಿಂದಿಯಿಂದಲೂ ಅನೇಕ ಲೇಖನಗಳನ್ನೂ ಅನುವಾದಿಸಿದ್ದಾರೆ. ಇತ್ತೀಚೆಗೆ ಅವರು ಬರೆದು ಪ್ರಕಟಣೆಗಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಕೊಟ್ಟಿರುವ "ಗಾಂಧೀಜಿ ಸೆರೆಮನೆವಾಸ" ಎಂಬ ಪುಸ್ತಕ ಅವರ ಅಧ್ಯಯನಶೀಲತೆಯ ಉದಾಹರಣೆಯಾಗಿದೆ.

ಸತ್ಯವ್ರತರು ಸರ್ವಸೇವಾ ಸಂಘದ ಸಹಕಾರ್ಯದರ್ಶಿಯಾಗಿ, ಕರ್ನಾಟಕ ಸರ್ವೋದಯ ಮಂಡಲದ ಅಧ್ಯಕ್ಷರಾಗಿ, ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿಯ ಅಧ್ಯಕ್ಷರಾಗಿ, ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರಾಗಿ, ವಿಧವಾ ವಿವಾಹಕ್ಕೆ ಪ್ರೋತ್ಸಾಹ ಕೊಡುವ ಮಾನವ ಮಂಟಪದ ಅಧ್ಯಕ್ಷರಾಗಿ, ಗಾಂಧೀ ಸ್ಮಾರಕ ನಿಧಿಯ ಸದಸ್ಯರಾಗಿ ಸಕ್ರಿಯ ಸೇವೆ ಸಲ್ಲಿಸಿದ್ದಾರೆ. ಇತ್ತೀಚೆಗೆ ಕಳೆದ ಎರಡು ವರ್ಷಗಳಿಂದ ಕರ್ನಾಟಕ ಸರ್ವೋದಯ ಸಂಘದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಕಾರ್ಯ ಕ್ಷೇತ್ರದಲ್ಲಿ ಸಕ್ರಿಯ ಕಾರ್ಯಕರ್ತರಾಗಿ, ಸಮಿತಿಗಳಲ್ಲಿ ಜಾಗೃತ ಸದಸ್ಯರಾಗಿ, ವಿಚಾರಗೋಷ್ಠಿಗಳಲ್ಲಿ ಶ್ರೇಷ್ಠ ಚಿಂತಕರಾಗಿ ಕಂಗೊಳಿಸುತ್ತಿದ್ದ ಸತ್ಯವ್ರತ ಸರ್ವೋದಯ ವಿಚಾರಕ್ಕೆ ಸಂಬಂಧಿಸಿದಂತೆ ಅಜಾತಶತ್ರು.

ಸತ್ಯವ್ರತ ತಾವು ಕೇವಲ ವಿಚಾರಕ್ಕೆ ಮಾತ್ರ ಸೀಮಿತವಾದವರಲ್ಲ, ತಾವು ಹೋರಾಟಗಾರರೂಸಹಎಂಬುದನ್ನುಪ್ರತ್ಯಕ್ಷಉದಾಹರಣೆಗಳಿಂದಸಾಬೀತುಗೊಳಿಸಿದ್ದರು. ತುರ್ತುಪರಿಸ್ಥಿತಿಯ ವಿರೋಧಿ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡು ಕಾರಾಗ್ರಹವಾಸ ಅನುಭವಿಸಿದ್ದರು. ಭೂದಾನ ಆಂದೋಲನದಲ್ಲಿ ತೊಡಗಿಸಿಕೊಂಡು ವಿನೋಬಾರ ಮೆಚ್ಚುಗೆಯ ಕಾರ್ಯಕರ್ತರಾಗಿದ್ದರು. ಅಂತೆಯೇ ಜೆ.ಪಿ.ಯವರ ಸಂಪೂರ್ಣಕ್ರಾಂತಿಯಲ್ಲಿ ಮುಂಚೂಣಿ ಕಾರ್ಯಕರ್ತರಾಗಿ ದುಡಿದು ಜಯಪ್ರಕಾಶರ ಪ್ರೀತಿ ಪಾತ್ರರಾಗಿದ್ದರು. ಸ್ವಾತಂತ್ರೋತ್ತರ ಕರ್ನಾಟಕದಲ್ಲಿ ರಾಷ್ಟ್ರ ಹಿತಚಿಂತನೆ ಮಾಡಿದ ಮತ್ತು ಶ್ರಮಿಸಿದ ಸತ್ಯವ್ರತರು ಭಾರತದ, ಮುಖ್ಯವಾಗಿ ಕರ್ನಾಟಕದ ಸರ್ವೋದಯ ಆಂದೋಲನದ ಇತಿಹಾಸದಲ್ಲಿ ಓರ್ವ ಆದರ್ಶವ್ಯಕ್ತಿಯಾಗಿ ದಾಖಲುಗೊಳ್ಳುತ್ತಾರೆ. ಕೌಟುಂಬಿಕ ಜೀವನ ನಡೆಸಿದರೂ ಬ್ರಹ್ಮಚರ್ಯ ಆಶ್ರಮದ ನಿಯಮಗಳನ್ನು ಪಾಲಿಸಿದ ಸತ್ಯವ್ರತರು ತಮ್ಮ ಹೆಸರಿಗೆ ತಕ್ಕಹಾಗೆ ಸತ್ಯವಂತರೇ ಆಗಿದ್ದರು. *– ಸುರೇಂದ್ರ ಕೌಲಗಿ*

ಅಂಬೇಡ್ಕರ್ ಮತ್ತು ಭೌದ್ಧಧರ್ಮ

ಇಪ್ಪತ್ತನೆಯ ಶತಮಾನದಲ್ಲಿ ಧರ್ಮಗಳು ಮತ್ತೆ ಮತ್ತೆ ಹೆಚ್ಚು ಆಕರ್ಷಕವಾಗಿ, ಜನರ ಹೃದಯ ಸ್ಪಂದನದ ಮಾಧ್ಯಮವಾಗಿ ಬಂದಿರುವುದನ್ನು ನಾವು ಕಾಣಬಹುದು. ಹಿಂದೂ, ಭೌದ್ದಧರ್ಮ, ಇಸ್ಲಾಂ, ಕ್ರಿಶ್ಚಿಯಾನಿಟಿ ಮುಖ್ಯವಾಗಿ ಈ ಧರ್ಮಗಳ ಅನೇಕ ಬಗೆಯ ಧಾರೆಗಳನ್ನು ಚಿಮ್ಮಿಸಿವೆ. ಪ್ರತಿಗಾಮಿಯಾದದ್ದೂ ಅವುಗಳಿಂದ ಹೆಚ್ಚು ಹುಟ್ಟಿದೆ. ಆದರೆ ಪ್ರಗತಿಪರ ದಂಗೆಯ ಆದರ್ಶವಾಗಿಯೂ ಅವು ಕೆಲಸ ಮಾಡಿವೆ.

ಬೌದ್ದ ಧರ್ಮದ ಚರ್ಚೆಗೆ ಹೋಗುವುದಕ್ಕೆ ಮುಂಚೆ ಹಿಂದೂ ಮತ್ತು ಇಸ್ಲಾಂ ಧರ್ಮಗಳು ಕೊಟ್ಟ ಪ್ರೇರಣೆಯನ್ನು ಕುರಿತು ನೋಡಬಹುದು. ಇಪ್ಪತ್ತನೆ ಶತಮಾನದಲ್ಲಿ ಭಾರತದಲ್ಲಂತೂ ಹಿಂದೂ ಧರ್ಮ ಬಹುಮಟ್ಟಿಗೆ ಪ್ರತಿಗಾಮಿಯಾಗಿಯೇ ಉಳಿಯಿತು. ಅದರೊಳಗಿನಿಂದ ಪ್ರಗತಿಪರ ಪುನರುಜ್ಜೀವನದ ಹಂಬಲ ಮತ್ತು ಹಠಗಳೇ ಹುಟ್ಟಿಬರಲಿಲ್ಲ. ಸ್ವಾಮಿ ಅಗ್ನಿವೇಶರಂಥವರು 'ವೈದಿಕ ಸಮಾಜವಾದ'ದ ಮಾತು ಆಡುತ್ತಾರಾದರೂ ಅದು ಈವತ್ತಿಗೂ ಬಡಜನರಿಗೆ ಸ್ಪೂರ್ತಿದಾಯಕವಾಗಬಲ್ಲ ಘೋಷಣೆಯಲ್ಲ. ಮೂರ್ತ ಆದರ್ಶವಾಗಿ ಅದು ಕಾಣುತ್ತಿಲ್ಲ. ಭಾತೀಯ ಉಪಖಂಡದಲ್ಲಂತೂ ಇಸ್ಲಾಂ ಬಹುಮಟ್ಟಿಗೆ ಹಿಂದೂ ಧರ್ಮದ ಹಾಗೆಯೇ ನಡೆದುಕೊಂಡಿದೆ. ಬೇರೆ ಇಸ್ಲಾಮಿಕ್ ದೇಶಗಳಲ್ಲಿ ನಡೆದ ಪ್ರಗತಿಪರ ಪುನರುಜ್ಜೀವನ ಚಿಂತಕ, ನಾಯಕರುಗಳು ಇಲ್ಲಿ ದೊಡ್ಡ ಮಟ್ಟದಲ್ಲಿ ಬರಲೇ ಇಲ್ಲ.

ಆದರೆ, ಅಮೇರಿಕದಂಥ ದೇಶಗಳಲ್ಲಿ ಈ ಎರಡೂ ಧರ್ಮಗಳು ವಿಚಿತ್ರ ಬಗೆಯ ಬಂಡಾಯಗಳಿಗೆ ಪ್ರೇರಣೆ ನೀಡಿದೆ ಎಂಬುದು ನಿಜಕ್ಕೂ ಅಶ್ಚರ್ಯದ ಸಂಗತಿ. ಅಮೇರಿಕದ ಹುಚ್ಚು ವಿಲಾಸವಾದಿ ನಾಗರೀಕತೆ ವಿರುದ್ಧ ಬಂಡೆದ್ದ ಬಿಳಿಯ ಯುವ ಜನಾಂಗಕ್ಕೆ ಹಿಂದೂಧರ್ಮದ 'ವಿರಕ್ತಿ' ಅನಾಸಕ್ತಿಯೋಗ, ಅಧ್ಯಾತ್ಮಿಕತೆ ಅನುಕರಣೀಯ ಆದರ್ಶಗಳಾಗಿ ಕಂಡವು. ಸಾವಿರಾರು ಜನ ಸುಶಿಕ್ಷಿತ, ಅನೂಕೂಲಸ್ಥ ಯುವಕ, ಯುವತಿಯರು ಬಿಳಿಯ ಅವಧೂತರಾಗಿಬಿಟ್ಟರು. 'ಯತಿಗಳಂತೆ ಕಂಡರು. ಒಂದು ದೃಷ್ಟಿಯಿಂದ 'ತಮ್ಮ' ವಿರುದ್ಧವೇ, 'ತಮ್ಮವರ' ವಿರುದ್ಧವೇ ಎದ್ದ ಬಂಡಾಯ ಅದು. ಆತ್ಮಶೋಧನೆ ವಿಶಾಲಾರ್ಥದಲ್ಲಿ ನಡೆದಾಗ ಅವರು ಹಿಂದೂ ಧರ್ಮದ ಕಡೆಗೆ ನಡೆದರು. ಅಮೇರಿಕದ 'ಪ್ರತಿಸಂಸ್ಕೃತಿ'ಯಲ್ಲಿ ಹಿಂದೂ ಧರ್ಮದ ಪಾತ್ರ ತುಂಬ ದೊಡ್ಡದು ಎಂಬುದನ್ನು ನಾವು ಮರೆಯುವ ಹಾಗೇ ಇಲ್ಲ.

ಆದರೆ, ಅಮೇರಿಕಾ ಸಮಾಜದ ಕಪ್ಪು ಜನರದು ಬೇರೆಯೇ ಆದ ಸಮಸ್ಯೆ, ಬೇರೆಯೇ ಆದ ಪ್ರತಿಕ್ರಿಯೆ. ಅವರ ಸಿಟ್ಟು ಬಿಳಿಯ ಸಮಾಜದ ವಿರುದ್ಧ, ಬಿಳಿಯ ಪ್ರಭುತ್ವದ ವಿರುದ್ಧ. ಅವರು ತಮ್ಮ ಪ್ರತಿಸ್ಪಂದನಕ್ಕೆ, ಸಿಟ್ಟಿಗೆ, ಬಂಡಾಯಕ್ಕೆ ಮಾಧ್ಯಮವನ್ನಾಗಿ ಕಂಡುಕೊಂಡದ್ದು ಇಸ್ಲಾಂ ಧರ್ಮವನ್ನು ಬಿಳಿಯರ ಆಧ್ಯಾತ್ಮಿಕ ಎನ್ನಬಹುದಾದ ಬಂಡಾಯಕ್ಕೆ ಸ್ಪೂರ್ತಿ ಹಿಂದೂ ಧರ್ಮ. ಕಪ್ಪು ಜನರ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಎನ್ನಬಹುದಾದ ಬಂಡಾಯಕ್ಕೆ ಸ್ಫೂರ್ತಿ ಇಸ್ಲಾಂ!

ಆದರೆ, ಭೌದ್ಧಧರ್ಮದ ಪ್ರೇರಣೆಯ ಚರಿತ್ರೆ ಆಧುನಿಕ ಜಗತ್ತಿನಲ್ಲಿ ಇವೆರಡಕ್ಕಿಂತ ಕೊಂಚ ಭಿನ್ನವಿದೆ. ಕುತೂಹಲದ ಸಂಗತಿ ಎಂದರೆ ಪಶ್ಚಿಮದ ಸಾಂಪ್ರಾದಾಯಿಕ ಎಡಪಂಥೇತರ ಪ್ರಗತಿಪರರು ಭೌದ್ಧಧರ್ಮಕ್ಕೆ ಮೊರೆ ಹೊಕ್ಕದ್ದೆ ಅದು, ಈ ಆಧ್ಯಾತ್ಮಿಕ ಮತ್ತು ಸಾಮಾಜಿಕ ಕ್ರಾಂತಿಗಳೆರಡಕ್ಕೂ ಅವಕಾಶ ಕೊಡಬಲ್ಲದ್ದು ಎಂಬ ಕಾರಣಕ್ಕೆ. ಇಂಥವರು ಪಟ್ಟಿ ತುಂಬ ದೊಡ್ಡದಿದೆ. ಬೌದ್ಧಧರ್ಮದಲ್ಲಿ ಸರ್ವಾದಿಕಾರೀ ವಿರೋಧೀ ಮುಕ್ತ ಸ್ಥಿತಿಯನ್ನು ಕಂಡ ಎರಿರ್ಕ

ಫ್ರಾಮ್ ಒಂದು ಕಡೆ ಮಾನವರ ಮೂರ್ಖ ಆರ್ಥಿಕ ಅಗತ್ಯತೆಗಳನ್ನು ಅಪಾಯಕಾರಿಯಲ್ಲದ ರೀತಿಯಲ್ಲಿ ನಿರ್ವಹಿಸಬಲ್ಲ ಮೌಲ್ಯಗಳು ಬೌದ್ಧಧರ್ಮದಲ್ಲಿವೆ ಎಂಬ ಕಾರಣಕ್ಕೆ ಶುಮಾಕರ್ 'ಬೌದ್ಧ ಆರ್ಥಿಕತೆ'ಯ ಮಾತನಾಡಿದ. ಒಟ್ಟಾರೆಯಾಗಿ ಕುತೂಹಲದ ಸಂಗತಿ ಎಂದರೆ ಬಂಡಾವಾಳಶಾಹಿ ನಾಗರೀಕತೆಯ ಮೌಲ್ಯಗಳಿಗೆ, ಸಂಸ್ಥೆಗಳಿಗೆ ಸಮರ್ಥವಾದ, ಶಕ್ತವಾದ ವಿರೋಧ ಬೌದ್ಧಧರ್ಮದ ನೀತಿಗಳಿಂದ ಬಂತು ಎಂಬುದು. ಮಾರ್ಕ್ಸವಾದದ ನಿಷ್ಠುರ ಭೌತವಾದದಿಂದಾಗಿ ಭೀತರಾದ ಮಂದಿಗಂತೂ ಬೌದ್ಧಧರ್ಮ ದೊಡ್ಡ ಸಾದ್ಯತೆಗಳ ಸೆಲೆ ಆಗಿ ಕಂಡದ್ದು ಸಹಜ. ಹಾಗೆ ನೋಡಿದರೆ, ಇಪ್ಪತ್ತನೆ ಶತಮಾನದ ರಾಜಕೀಯ ಚರಿತ್ರೆಯ ತುಂಬ ಮುಖ್ಯ ಬೆಳವಣಿಗೆ ಇದು. ಆಧುನಿಕ ಪಶ್ಚಿಮ ನಾಗರೀಕತೆಯಲ್ಲಿ ರಾಜಕಾರಣ ಎಂದರೆ ಅದೇ ಒಂದು ಅಲಾಯದವಾದ ಶುದ್ದ ಸಂಸ್ಥೆಯಾಗಿ, ಆಚರಣೆಗಳಾಗಿ ಬೆಳೆದು ಬಿಟ್ಟಿತು. ಆರ್ಥಿಕತೆ ಎನ್ನುವುದು ತನಗೆ ತಾನೇ ಬೆಳೆದು ಅಲಾಯದವಾಗಿ ಬಂದ ಸ್ಥಿತಿ ಬಂತು. ಪ್ರತಿಯೊಂದು ಕ್ಷೇತ್ರವೂ ಹೀಗೆ ಅಲಾಯದವಾಗಿ ಪ್ರತ್ಯೇಕವಗಿ ಬೆಳೆದ ಸ್ಥಿತಿ ಕಂಡು ಭೀತರಾದ, ಅತಂಕಗೊಂಡ ಜನರು ಸಾಕಷ್ಟಿದ್ದರು.ರಾಜಕೀಯಕ್ಕೆ, ಆರ್ಥಿಕತೆಗೆ, ವಿಜ್ಞಾನಕ್ಕೆ ಸಂಸ್ಕೃತಿಯ, ಧರ್ಮದ, ಆಧ್ಯಾತ್ಮಿಕ ನಿಯಂತ್ರಣ ಅಗತ್ಯ ಎಂದು ಸಾಕಷ್ಟು ಜನ ತುಂಬ ತೀವ್ರವಾಗಿಯೇ ಭಾವಿಸಿದರು. ಶುದ್ದ ಆರ್ಥಿಕತೆ ಹುಚ್ಚು ಕನ್ಸೂಮರ್ ಸಮಾಜ ಸೃಷ್ಟಿಸುತ್ತದೆ. ಶುದ್ಧವಿಜ್ಞಾನ ಬಾಂಬನ್ನು ಅಪಾಯಕಾರೀ ಫ್ರಾಂಖೆನ್‌ಸ್ಟೈನ್ ಅನ್ನು ಸೃಷ್ಟಿಸುತ್ತದೆ. ಹೀಗಾಗಿ, ಜೀವನದ ಎಲ್ಲ ಕ್ಷೇತ್ರಗಳೂ ಅಖಂಡವಾಗಿ ನಿಲ್ಲಬಲ್ಲ, ಸಮಾನತೆ, ಸಮೃದ್ಧಿಗಳು ಉಳಿಯಬಲ್ಲ ಕ್ರಮಗಳಿಗಾಗಿ ಹುಡುಕಾಡಿದಾಗ ಅಲ್ಲಿ ಪ್ರಧಾನವಾಗಿ ಕಂಡದ್ದು ಬೌದ್ಧಧರ್ಮವೇ.

ಅಂಬೇಡ್ಕರ್ ವೈಚಾರಿಕ ಪ್ರಯಾಣವೂ ಹಾಗೇ ನಡೆದದ್ದು. ಆದ್ದರಿಮದ, ಅವರು ಭೌದ್ಧ ಧರ್ಮದ ಮಡಿಲಿಗೆ ನಡೆದದ್ದು ಹೆಚ್ಚು ಸಮಗ್ರವಾದ ಜೀವನಕ್ರಮದ, ಸಮಾಜ ಪುನರ್‌ನಿರ್ಮಾಣದ ಮಾದರಿಗಳನ್ನು ಹುಡುಕುವ ಪ್ರಯತ್ನದ ಅಂಗವಾಗಿಯೇ.

ಅಂಬೇಡ್ಕರ್ ಬೌದ್ಧಧರ್ಮಕ್ಕೆ ಬರುವ ಮುಂಚೆ ಉಳಿದ ಅನೇಕ ಧರ್ಮಗಳಿಗೆ ಸೇರುವ ಸಾಧ್ಯತೆಯನ್ನು ಪರೀಕ್ಷಿಸಿದರು ಎಂಬುದು ಈಗಾಗಲೇ ಪ್ರಸಿದ್ಧವಾದ ಸಂಗತಿ. ಆದರೆ, ಅದರ ಹಿಂದಿನ ತತ್ವವನ್ನು, ಆಶಯವನ್ನು ಅರ್ಥಮಾಡಿಕೊಳ್ಳಬಲ್ಲ ವೈಚಾರಿಕ ಪ್ರಯತ್ನಗಳು ಅಷ್ಟಾಗಿ ಆಗಿಲ್ಲ ಎಂದೇ ಹೇಳಬೇಕು. ಈ ಮತಾಂತರದ ಪ್ರಯತ್ನ ಗಾಂಧಿಗೆ ಕೂಡಾ ಸಾಕಷ್ಟು ಆಂತಕವನ್ನೆ ಹುಟ್ಟಿಸಿತ್ತು. ಅಂಬೇಡ್ಕರ್ ವ್ಯಕ್ತಿತ್ವದ ಮಹತ್ವ, ಶಕ್ತಿ ಗಾಂಧಿಗೆ ಅರ್ಥವಾಗಿತ್ತು. ಅದಕ್ಕಾಗಿಯೇ ಅಂಬೇಡ್ಕರರನ್ನು ಅವರು ಒಂದು ಕಡೆಗೆ 'ಮಹಾತ್ಮ' ಎಂದು ಕರೆಯುತ್ತಾರೆ. ಆದರೆ, ಜತೆಗೇ ಧರ್ಮವೇನು ಬೇಕಾದಾಗ ಬದಲಾಯಿಸಲು ಬಟ್ಟೆಯಿಲ್ಲ, ಮನೆಯಿಲ್ಲ ಎನ್ನುತ್ತಾರೆ. ಗಾಂಧಿ ಆ ಕ್ಷಣದಲ್ಲಿ ಧರ್ಮವನ್ನು ಒಂದು ಆಧ್ಯಾತ್ಮಿಕ ಅಗತ್ಯ ಎಂಬರ್ಥದಲ್ಲಿ ಮಾತ್ರ ಹೇಳುತ್ತಿದ್ದರು. ಅಂಬೇಡ್ಕರರಿಗೆ ಆ ಸನ್ನಿವೇಶದಲ್ಲಿ ಧರ್ಮದ ಸಾಮಾಜಿಕ, ಚಾರಿತ್ರಿಕ ಆಯಾಮಗಳು ತುಂಬ ಮುಖ್ಯವಾಗಿ ಕಂಡಿತ್ತು.

ಅಂಬೇಡ್ಕರರಿಗೆ ಬೌದ್ಧಧರ್ಮ ಎನ್ನುವುದು ತಮ್ಮ ಹೋರಾಟಕ್ಕೆ ಸಿಕ್ಕಿದ್ದ ಚಾರಿತ್ರಿಕ ಸಮರ್ಥನೆ. ಚಾರಿತ್ರಿಕವಾದ ಸ್ಥಿತಿಯೊಂದನ್ನು ವರ್ತಮಾನಕ್ಕೆ ತರುವ ಮೂಲಕ ತಮ್ಮ ಹೋರಾಟಕ್ಕೆ ಹೆಚ್ಚು ದೊಡ್ಡ ಪರಂಪರೆಯೊಂದನ್ನು ನಿರ್ಮಿಸಿಕೊಳ್ಳುವ ಪ್ರಯತ್ನ ಅದು. ದಲಿತರಿಗೆ ದೊಡ್ಡ ಸಾಂಸ್ಕೃತಿಕ ಪರಂಪರೆಯೊಂದನ್ನು ಕಟ್ಟಿಕೊಡುವ ಮಹಾನ್ ಪ್ರಯತ್ನದ ಭಾಗ ಅದು.

ಅಂಬೇಡ್ಕರ್ ಸಂಸ್ಕೃತಿಯನ್ನು ಎರಡು ಅಯಾಮಗಳಲ್ಲಿ ಗ್ರಹಿಸಿಕೊಂಡರು. ಒಂದು, ಹೋರಾಟವೇ ಸಂಸ್ಕೃತಿಯಾಗಿ. ದಲಿತರ ತಕ್ಷಣದ ಬದುಕಿನಲ್ಲಿ, ಸಂಸ್ಕೃತಿಯಲ್ಲಿ ಅಂಬೇಡ್ಕರರಿಗೆ ಅಭಿಮಾನ ಪಡುವಂಥದ್ದೇನೂ ಕಾಣಲಿಲ್ಲ. ಅವಮಾನ ಸಂಪೂರ್ಣವಾಗಿ

ದಲಿತರನ್ನು ನಾಶಮಾಡಿದ್ದ ಸ್ಥಿತಿಯೇ ಸಂಸ್ಕೃತಿಯಲ್ಲಿ ಅವರಿಗೆ ಮುಖ್ಯವಾಗಿ ಕಂಡಿತಯ. ಹೋರಾಟ ಹೊಸ ಮೌಲ್ಯಗಳನ್ನು ಕಲಿಸುವ ಮೂಲಕ ಹೊಸ ಸಂಸ್ಕೃತಿಯನ್ನು ಕೊಡುವ ಮಾಧ್ಯಮವಾಗಿ ಅವರಿಗೆ ಕಂಡಿತು. ಆತ್ಮದ್ವೇಷ, ಆತ್ಮಾವಹೇಳನ, ಮೇಲುಕೀಳು, ಪ್ರತಿಯೊಂದು ಜಾತಿಯೂ ಇನ್ನೊಂದನ್ನು ಕೀಳಾಗಿ ಕಾಣುವ ವಿಷವೃತ್ತಗಳ ವಿರುದ್ಧ ಸ್ವಾಭಿಮಾನದ ಹೋರಾಟ ಪರಿಣಾಮಕಾರೀ ಅಸ್ತ್ರವಾಗಿ ಕಂಡಿತು.

ಆದರೆ, ಇಲ್ಲಿ ಹೋರಾಟಗಾರರಿಗೂ, ಮುಖ್ಯವಾಗಿ ಸಂಸ್ಕೃತಿಯ ನೆಲೆಯಲ್ಲಿ ನಿಂತು ಹೋರಾಡುವ ಮಂದಿಗೆ ವರ್ತಮಾನ ಎಷ್ಟು ಮುಖ್ಯವೋ, ಪರಂಪರೆಯೂ ಅಷ್ಟೇ ಮುಖ್ಯ. ತಮ್ಮ ಹೋರಾಟ ಬರೀ ವರ್ತಮಾನದ್ದಲ್ಲ ಎಂದು ಸಾಧಿಸುವ ಹಠ ಅಲ್ಲಿ ಮುಖ್ಯ. ಚರಿತ್ರೆಯ ಆಳದಿಂದ ತಮ್ಮ ಆಶಯಗಳನ್ನು, ಪ್ರತಿಮೆಗಳನ್ನು ಎತ್ತಿಕೊಳ್ಳುವ ಪ್ರಯತ್ನ ಇಲ್ಲಿ ತುಂಬ ಮಹತ್ವದ ಪಾತ್ರ ವಹಿಸುತ್ತದೆ. ಚರಿತ್ರೆಯನ್ನೇ ಪರಂಪರೆಯನ್ನೆ ಬೇರೆ ರೀತಿಯಲ್ಲಿ ವ್ಯಾಖ್ಯಾನಿಸುವ ಪ್ರಯತ್ನದಿಂದಾಗಿ ವರ್ತಮಾನದ ಹೋರಾಟಕ್ಕೆ ಬೇರೆಯೇ ಆದ ಬಣ್ಣ ಖದರು ಬಂದುಬಿಡುತ್ತದೆ. ಅಂಬೇಡ್ಕರ್ ಬೌದ್ಧಧರ್ಮದ ಜತೆಗೆ ಮುಖಾಮುಖಿಯಾದದ್ದು ಈ ಹಿನ್ನಲೆಯಲ್ಲಿ. ಅಸ್ಪೃಶ್ಯರು ಕ್ರೈಸ್ತರಾದರೆ ಅವರಿಗೆ ಎಷ್ಟು ಶತಮಾನಗಳ ಪರಂಪರೆ ಇರಲು ಸಾಧ್ಯ? ಮುಸ್ಲಿಮರಾದರೂ ಅಷ್ಟೇ. ಸಿಖ್ಖರಾದರೂ ಅಷ್ಟೇ. ಸಂಸ್ಕೃತಿಯ ಎರಡನೆಯ ಕಲ್ಪನೆ ಎಂದರೆ, ಅದು ಚರಿತ್ರೆ, ಪರಂಪರೆ ಎಂದು ಅಂಬೇಡ್ಕರರರ ಉರಿಯುವ ಛಲ ಹೆಚ್ಚು ಆಳವಾದ ನೆಲೆಗೆ ತಲುಪುವ ಹಠ ಉಳ್ಳದ್ದು. ಭಾರತೀಯ ನಾಗರೀಕತೆಯ ಮೂಲಕ್ಕೇ ತಮ್ಮ ಹೋರಾಟವನ್ನು ಒಯ್ಯುವ ಹಠ ಅಂಬೇಡ್ಕರ್‌ರದು. ಹೀಗಾಗಿ, ಅಸ್ಪಶ್ಯತೆಯ ಚರಿತ್ರೆ ಮತ್ತು ಬೌದ್ಧಧರ್ಮದ ನಡುವೆ ಹೊಸ ರೀತಿಯ ಸಂಬಂಧಗಳನ್ನು ಅಂಬೇಡ್ಕರ್ ಕಂಡರು. ಅಸ್ಪೃಶ್ಯ ಸಂಸ್ಕೃತಿಹೀನನಲ್ಲ. ಬದಲಾಗಿ ಧೀರ್ಘವದ, ಉದಾತ್ತವದ ಹಿನ್ನಲೆ ಉಳ್ಳವನು ಎಂದು ವ್ಯಾಖ್ಯಾನಿಸುವ ಮೂಲಕ ವರ್ತಮಾನದ ಹೋರಾಟಕ್ಕೆ ಹೊಸ ನೆಲೆ ಕೊಡಲು ಪ್ರಯತ್ನಿಸಿದರು. ಅಸ್ಪೃಶ್ಯತೆಯ ಮೂಲವನ್ನು ಕುರಿತ ಅವರ ಚಿಂತನೆಯನ್ನು ನಾವು ಅರ್ಥಮಾಡಿಕೊಳ್ಳಬೇಕಾದದ್ದು ಈ ಹಿನ್ನಲೆಯಲ್ಲಿಯೇ.

ಅಂಬೇಡ್ಕರ್ ಹಿಂದೂಧರ್ಮವನ್ನು, ಅದರ ತಾತ್ವಿಕತೆಯನ್ನು ವಿಮರ್ಶಿಸಿದ ರೀತಿಗೂ, ಬೌದ್ಧಧರ್ಮದ ಗ್ರಹಿಕೆಗಳಿಗೂ ತಕ್ಷಣದ ಒಂದು ಸಮರತ್ಮಕ ಉಪಯುಕ್ತತೆ ಇದಗಿ ಬಂದದ್ದು ತುಂಬ ಕುತೂಹಲಕರಿ. ಒಂದು ವಲಯದಲ್ಲಿ ಅಂಬೇಡ್ಕರ್ ಹಿಂದೂ ಧರ್ಮವನ್ನು ವಿಮರ್ಶಿಸಿದ್ದು ಪಶ್ಚಿಮ ನಾಗರೀಕತೆಯ ಕೆಲವು ಶ್ರೇಷ್ಠಮೌಲ್ಯಗಳ ಹಿನ್ನಲೆಯಲ್ಲಿ. ಸಮಾನತೆ, ಸೋದರತೆ, ಸ್ವಾತಂತ್ರ್ಯಗಳು ಹಿಂದೂ ಧರ್ಮದಲ್ಲಿ ಇಲ್ಲವೇ ಇಲ್ಲ ಎಂದು ತಮ್ಮ ಚಿಂತನೆಯಲ್ಲಿ ಸಮರ್ಥವಾಗಿ ಸಾಬೀತುಮಾಡಿದರು. ಜತೆಗೆ, ಬೌದ್ಧಧರ್ಮ ವೈದಕ ಧರ್ಮವನ್ನು ಖಂಡಿಸಿದ ಕ್ರಮಗಳನ್ನು ಬಳಸಿಕೊಂಡು ತಮ್ಮ ಟೀಕೆಯನ್ನು ಹೆಚ್ಚು ಆಳವಾಗಿ ಮಾಡಿದರು. ಬೌದ್ಧಧರ್ಮ ಕರ್ಮಕಾಂಡವನ್ನು, ವೈದಿಕವಿಲಾಸೀ ಜೀವನವನ್ನು, ಅತಿ ಲೌಕಿಕತೆಯನ್ನು ಖಂಡಿಸಿದ ಕ್ರಮವನ್ನೇ ಅಂಬೇಡ್ಕರ್ ಹೆಚ್ಚು ಸೂಕ್ಷ್ಮವಾಗಿ ಬಳಸಿಕೊಂಡರು. ವೈದಿಕಧರ್ಮವನ್ನು ಬೌದ್ಧಧರ್ಮ ಪ್ರಧಾನವಗಿ ವಿಮರ್ಶಿಸಿದ್ದು ತನ್ನ ಪ್ರಖರವಿಚಾರವಾದದ ನೆಲೆಯಲ್ಲಿ. ಪುರೋಹಿತಶಾಹಿಯ ಸುಳ್ಳುಧರ್ಮ ಮತ್ತು ತಮ್ಮ ಅಧಿಕೃತ ಧರ್ಮದ ಕಲ್ಪನೆಗಳೆರಡನ್ನೂ ಬೌದ್ಧಧರ್ಮ ಪರಿಣಾಮಕಾರಿಯಾಗಿಯೇ ಮುಂದಿಟ್ಟಿತು. ವೈದಿಕ ಧರ್ಮ ಪೊಳ್ಳು ಪವಾಡಗಳನ್ನು ಅಲೌಕಿಕತೆ ಎಂದು ನಂಬಿಸುವ ಮಟ್ಟಕ್ಕೆ ಇಳಿದಿತು. ಕಣ್ಕಟ್ಟುಗಳನ್ನೆ ಕಾಣ್ಕೆ ಎಂದು ಹೇಳುತ್ತಿತ್ತು. ಪೊಳ್ಳು ಪೂಜಾರಿಗಳು, ಮೋಸಗಾರ ಮಾಂತ್ರಿಕರನ್ನು ಬೌದ್ಧ ಧರ್ಮ ಸುಲಭವಾಗಿ ತನ್ನ ಜೀವನನಿಷ್ಠ ಸತ್ಯದ, ತರ್ಕದ ಆಧಾರದಿಂದ ಬಯಲಿಗೆ ಎಳೆಯಿತು.

ಬುದ್ಧನ ಜೀವನ ಚರಿತ್ರೆಯಲ್ಲಿ ಬರುವ 'ಸುನಖ್ಖತ್ತನ ಪ್ರಸಂಗ'ದಲ್ಲಿ ಈ ಅಂಶ

ಮಾರ್ಮಿಕವಾಗಿ ವ್ಯಕ್ತವಾಗುತ್ತದೆ. ಮಾಡದ ಬುದ್ಧನ ಮೇಲೆ ಪ್ರೀತಿ. ಪವಾಡಗಳನ್ನು ಮಾಡುವ ಮಾಯಾವಿ ಯತಿಗಳನ್ನು ಕಂಡು ಆಸೆ. ಬುದ್ದನೇ ಪವಾಡಗಳನ್ನು ಏಕೆ ಮಾಡಬಾರದು ಎನ್ನಿಸಿ ಹೋಗಿ ಶಾಕ್ಯ ಮುನಿಗೆ ಕೇಳಿಯೂ ಕೇಳುತ್ತಾನೆ. ಬುದ್ದನೂ ಕಡೆಗೆ ಎಂಥದೊ ಪವಾಡ ನಡೆಸಿದರೂ, ಅಂತಿಮವಾಗಿ ತನ್ನ ಪವಾಡವಿರೋಧಿ ಧಾರ್ಮಿಕತೆಯ ನೆಲೆಗಳನ್ನು ವಿವರವಾಗಿ ಬಿಚ್ಚಿಡುತ್ತಾನೆ.

ಅಂಬೇಡ್ಕರರಿಗೆ ಬೌದ್ಧಧರ್ಮದಲ್ಲಿ ವಿಶೇಷ ಆಕರ್ಷಕ ಅಂಶಗಳೆಂದರೆ ಇವೇ. ಮಾಟಮಂತ್ರ ಪವಾಡಗಳಲ್ಲದೆ ಮೂರ್ತಮಾನವೀಯತೆಯನ್ನು ಆಧರಿಸಿದ ಧರ್ಮದ ಕಲ್ಪನೆ ನಿಜಕ್ಕೂ ಹೃದಯಸ್ಪರ್ಶಿಯಾಗಿ ಕಂಡಿರಬೇಕು.

ಹಿಂದೂಧರ್ಮದ ಸಂವೇದನೆಯು ಕೆಲವು ಮುಖ್ಯ ಸಮಸ್ಯೆಗಳನ್ನು ಅಂಬೇಡ್ಕರ್ ಬೌದ್ಧಗ್ರಹಿಕೆಯ ಕ್ರಮದ ಮೂಲಕ ಎದುರಾಗುತ್ತಾರೆ. ಅದರಲ್ಲಿ ತುಂಬ ಮುಖ್ಯವಾದದ್ದು ಎಂದರೆ ಚರಿತ್ರೆಯ ಎದುರು ತಾಟಸ್ಥ್ಯದ ಕಲ್ಪನೆ. ಅಥವಾ 'ಒಳಿತು' ಎಂದರೆ ದುಷ್ಟ ಚಿಂತನೆ, ಕ್ರಿಯೆಗಳಿಂದ ದೂರವಿರುವುದು, ಅದರ ಸಂಪರ್ಕ ಇಲ್ಲದಿರುವಿಕೆ ಮಾತ್ರ ಎಂದರ್ಥ. ಈ ' ತಾಟಸ್ಥ್ಯ' ಎನ್ನುವುದು ದೊಡ್ಡ ಅಧ್ಯಾತ್ಮಿಕ ಆನಂದದ ಕಲ್ಪನೆ ಎಂಬಂತಾಗಿತ್ತು. ಸ್ವತಃ ವಿವೇಕಾನಂದರಿಗೂ ಈ ಪೌರತ್ವ ಮತ್ತು ಅನಂದದ ಸಮಸ್ಯೆ ಕಾಡತೊಡಗಿತ್ತು. ಅದನ್ನು ದಾಟಿದ್ದೇ ವಿವೇಕಾನಂದರ ದೊಡ್ಡ ಸಾಧನೆಯಾದರೂ, ಅದು ಮತ್ತೆ ತಮ್ಮನ್ನು ಕಾಡಿದ್ದನ್ನು ಕುರಿತು ನಮ್ಮ ಪತ್ರಗಳಲ್ಲಿ ವಿವೇಕಾನಂದ ಪ್ರಸ್ತಾಪಿಸುತ್ತಾರೆ.

ಅಂಬೇಡ್ಕರ್ ಹೆಚ್ಚು ಸೂಕ್ಷ್ಮವಾದ ರೀತಿಯಲ್ಲಿ ಚಿಂತಿಸಿ ಕ್ರಿಯಾಶೀಲವಾದ ಒಳಿತಿನ ಅಗತ್ಯತೆಯನ್ನು, ಸಕ್ರಿಯ ಪ್ರೇಮದ ಅಗತ್ಯತೆಯನ್ನು ಪ್ರತಿಪಾದಿಸುತ್ತಾರೆ. ಆ ಮೂಲಕ ಆಧಿನಿಕ ಸಮಾಜವಾದಗಳು ಹೇಳುವ ಸಮರಶೀಲತೆಯ ತಾತ್ವಿಕ ನೆಲೆಯನ್ನು ಸಿದ್ದಮಾಡುತ್ತಾರೆ. ಧಾರ್ಮಿಕ ಮನಸ್ಥಿತಿ ಮತ್ತು ಸಮರಶೀಲತೆಗಳ ಐಕ್ಯ ಸ್ಥಿತಿಯನ್ನು ಕಾಣುತ್ತಾರೆ. ಆದರೆ, ಸಮರಶೀಲತೆ ಎನ್ನುವುದು ಜೀವವಿರೋಧಿ ಮತ್ತು ಹಿಂಸಾತ್ಮಕ ನೆಲೆಯದು ಆಗಬೇಕಿಲ್ಲ ಎನ್ನುವುದನ್ನು ಸಾಬೀತು ಮಾಡುತ್ತಾರೆ.

ಅಂಬೇಡ್ಕರ್‌ರ ಬೌದ್ಧಧರ್ಮದ ತಿರುಳು ಇದು : ಸಮಸ್ತ ಶೋಷಿತ ಸಮುದಾಯದ ವಿಮೋಚನೆ ಪ್ರೀತಿ ಮತ್ತು ಸಹಾನುಭೀತಿಗಳಿಂದ ಹುಟ್ಟಿದ ಸಮರಶೀಲತೆಯಿಂದ ಸಾಧ್ಯ ಎಂದು. ಈ ಬಗೆಯ ನಿಲುವಿಗೆ ಈಗ ಇನ್ನಷ್ಟು ಪ್ರಾಮುಖ್ಯತೆಯನ್ನು ಇಡೀ ಜಗತ್ತಿನಾದ್ಯಂತ ಕಾಣಲು ಸಾಧ್ಯ. (ಸಂಗ್ರಹಾನುವಾದ : ಡಿ.ಆರ್.ನಾಗರಾಜ)

* * *

೭ನೇ ಪುಟದಿಂದ . . . .

ಸುರೇಶ್‌ರವರು ತುಂಬ ವಿಭಿನ್ನತೆಯನ್ನು ಮೆರೆದಿದ್ದಾರೆ. ಪ್ರತಿಯೊಂದು ಕವನದ ಅಂತ್ಯ ಓದುಗರನ್ನು ನವುರಾದ ಚಿಂತನೆಗೆ ಹಚ್ಚುತ್ತದೆ. ಉದಾಹರಣೆಗೆ "ಬಾಯಿ ಮುಚ್ಚಿ ಕುಣಿದರೆ ನವಿಲು ಇನ್ನೂ ಚೆನ್ನ", "ಹೊಸರೀತಿ ಇರಬೇಕೆಂದು ಮನೆಯನ್ನ ಮುರಿದು ಕಟ್ಟಬಾರದು", "ವಿಪರೀತ ಬೊಗಳ ಬಾರದು, ನಾಯಿಗೆ ಇದನ್ನು ಹೇಳುವುದು ಹೇಗೆ". ಈ ಪುಸ್ತಕಕ್ಕೆ ಯಾರ ಮುನ್ನುಡಿಯೂ ಇಲ್ಲ. ಏಕೆಂದರೆ ಕವಿ ಈ ಪದ್ಯಗಳಿಗೆ "ಚೆನ್ನಾಗಿದ್ದರೆ ಕಣ್ಣಿಗೆ ಬೀಳುತ್ತೀರಾ ಎಂದು ಈ ಪದ್ಯಗಳಿಗೂ ಹೇಳಿದ್ದೇನೆ"! ಎಂದು ತಮ್ಮ ಪದ್ಯಗಳಿಗೆ ಸೂಚಿಸಿದ್ದರಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ.

* * *

ಜನಪದ ಸೇವಾಟ್ರಸ್ಟ್ ಸಮಾಚಾರ

ಟ್ರಸ್ಟಿನ ಖಾದಿ ನೇಯ್ಗೆ ವಿಭಾಗಕ್ಕೆ ಇನ್ನು ಇಬ್ಬರು ಮಹಿಳೆಯರು ಸೇರಿಕೊಂಡರು. ಈಗ ಅವರ ಸಂಖ್ಯೆ ೬. ಕೇಂದ್ರದಲ್ಲಿ ತಯಾರಾಗುತ್ತಿರುವ ಹೆಗಲು ಚೀಲಗಳಿಗೆ ಬೇಡಿಕೆ ಇದೆ. ಈ ಕೇಂದ್ರವನ್ನು ಬೆಳಸಲು ಪ್ರಯತ್ನಿಸಲಾಗುತ್ತಿದೆ.

ಈ ಕೆಳಗೆ ಕಾಣಿಸಿದ ಮಹನೀಯರು ಟ್ರಸ್ಟಿಗೆ ಭೇಟಿ ಕೊಟ್ಟರು. ಪಿ.ಎನ್.ನರಸಿಂಹರಂಗನ್ ಮತ್ತು ಅವರ ಮನೆಯವರು. ನರಸಿಂಹರಂಗನ್ ಅವರು ಕಥಾಕುಂಜ ಕಾರ್ಯಕ್ರಮದ ಅಂಗವಾಗಿ ಮಕ್ಕಳಿಗೆ ಕಥೆ ಕೂಡ ಹೇಳಿದರು.

ಶಿವಮೊಗ್ಗದಿಂದ ಟ್ರಸ್ಟಿನ ಅಭಿಮಾನಿಗಳಾದ ಮಂಜುಳಾ ಮತ್ತು ರಾಜುರವರು ಭೇಟಿಕೊಟ್ಟರು.

ಕರುಣಾಗೃಹದ ಹಳೆಯ ವಿದ್ಯಾರ್ಥಿ ಹನುಮಂತ ಮತ್ತು ಅವನ ಹೆಂಡತಿ ಹಾಗೂ ಶಬೀರ್ ಮತ್ತು ಶಿವಕುಮಾರ ಭೇಟಿಕೊಟ್ಟರು.

ಬೆಂಗಳೂರು ವಿಶ್ವವಿದ್ಯಾನಿಲಯದ ಗಾಂಧೀ ಭವನದ ಒಂಭತ್ತು ವಿದ್ಯಾರ್ಥಿಗಳು ಆ ಕೇಂದ್ರದ ಕಾರ್ಯಕರ್ತರಾದ ಪದ್ಮರವರ ನೇತೃತ್ವದಲ್ಲಿ ಟ್ರಸ್ಟಿಗೆ ಭೇಟಿಕೊಟ್ಟು ಟ್ರಸ್ಟಿನ ಕಾರ್ಯಕಲಾಪದ ಪರಿಚಯ ಮಾಡಿಕೊಂಡರು.

ಮೈಸೂರಿನಲ್ಲಿರುವ ಟ್ರಸ್ಟಿನ ಅಭಿಮಾನಿ ಹಾಗೂ ಕಣ್ಣಿನ ವೈದ್ಯರಾದ ಡಾ.ಮಧುಸೂಧನ್, ಪತ್ನಿ ಸುನಿತಾ, ಮಗಳು ಧನ್ಯ ಭೇಟಿಕೊಟ್ಟರು.

ಅಲ್ಲದೆ ಬೆಂಗಳೂರು ವಿಶ್ವವಿದ್ಯಾನಿಲಯದ ೩೫ ವಿದ್ಯಾರ್ಥಿಗಳು ಪ್ರೊಫೆಸರ್ ಜೀವನ್ ಕುಮಾರ್ ನೇತೃತ್ವದಲ್ಲಿ ಟ್ರಸ್ಟಿಗೆ ಭೇಟಿಕೊಟ್ಟರು.

ಟ್ರಸ್ಟಿನ ಉಳಿದ ಕಾರ್ಯಕ್ರಮಗಳು ಎಂದಿನಂತೆ ಚೆನ್ನಾಗಿ ನಡೆದುಕೊಂಡು ಬಂದವು.


೨೦೦೯ ಮಾರ್ಚ್ ಮಾಹೆಯ ದಾನಿಗಳು

ಶ್ರೀ ಕೆ.ಬಿ.ನಾರಾಯಣ್, ಎಂ.ಸಿ.ಕೆ.ಎಸ್. ಟ್ರಸ್ಟ್, ನಿರ್ದೇಶಕರು
ಗಾಂಧೀಭವನ, ಬೆಂಗಳೂರು;
ಶ್ರೀ ಬಿ.ಆರ್.ದೇಶಪಾಂಡೆ, ಬಾಗಲಕೋಟೆ
ಶ್ರೀ ನಾರಾಯಣಗೌಡ, ಕೋಲಾರ
ಮತ್ತು
ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ .. ೬೫

– ಸುರೇಂದ್ರ ಕೌಲಗಿ

ಟ್ರಸ್ಟಿನ ಧ್ಯೇಯೋದ್ದೇಶಗಳಲ್ಲಿ ಗ್ರಾಮೀಣ ಮಕ್ಕಳಿಗೆ ಶಿಕ್ಷಣದ ಅವಕಾಶವನ್ನು ಕಲ್ಪಿಸಿಕೊಡುವುದೂ ಒಂದು. ಈ ಉದ್ದೇಶಕ್ಕನುಗುಣವಾಗಿ ೧೯೬೦ರಿಂದಲೂ ಟ್ರಸ್ಟ್ ಶಿಶುವಿಹಾರವನ್ನು ನಡೆಸಿಕೊಂಡು ಬಂದಿದೆ. ಇಂದಿಗೂ ಟ್ರಸ್ಟಿನ ಶ್ರೀ ಕೃಷ್ಣ ಶಿಶುವಿಹಾರ ಗ್ರಾಮದಲ್ಲಿ ನೆಚ್ಚಿನ–ಮೆಚ್ಚಿನ ಸಂಸ್ಥೆಯಾಗಿದೆ. ಕಾಲಾನಂತರದಲ್ಲಿ ಜನಪದ ವಿದ್ಯಾಲಯವೆಂಬ ಹೆಸರಿನಲ್ಲಿ



ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಲಾಯಿತು. ಈ ಶಾಲೆ ಕೂಡ ಗ್ರಾಮದ ಹಿರಿಯರ ಮೆಚ್ಚುಗೆಗೆ ಪಾತ್ರವಾಗಿ ಬೆಳೆದು ನಂತರ ಮಾಧ್ಯಮಿಕ ಏಳನೇ ತರಗತಿಯ ವರೆಗೆ ಮಕ್ಕಳಿಗೆ ಶಿಕ್ಷಣ ಕೊಡಲು ಪ್ರಾರಂಭಿಸಿತು. ಮಾಧ್ಯಮಿಕ ಶಾಲೆಯನ್ನು ಪ್ರಾರಂಭಿಸುವಾಗಿ ಶಿಕ್ಷಣ ಇಲಾಖೆ ಕೆಲವು ಕರಾರುಗಳನ್ನು ವಿಧಿಸಿತು. ಈ ಕರಾರುಗಳಿಗೆ ಲಿಖಿತ ಒಪ್ಪಿಗೆ ಕೊಟ್ಟರೆ ಮಾನ್ಯತೆ ಕೊಡಲಾಗುವುದೆಂದು ಇಲಾಖೆ ತಿಳಿಸಿತು. ಅದರಲ್ಲಿ ಪ್ರಮುಖವಾದದ್ದು ಸರ್ಕಾರದಿಂದ ಅನುದಾನ ಬಯಸುವುದಿಲ್ಲವೆಂಬುದು. ಈ ಕರಾರನ್ನು ಟ್ರಸ್ಟ್ ಒಪ್ಪಿ ಬರೆದುಕೊಟ್ಟಿತು. ನಂತರ ಶಾಲೆ ಕನ್ನಡ ಮಾಧ್ಯಮದಲ್ಲಿ ಶಾಶ್ವತ ಅನುದಾನ ರಹಿತವಾಗಿ ಪ್ರಾರಂಭವಾಯಿತು. ಶಾಲೆಯಲ್ಲಿ ಮಕ್ಕಳ ಸಂಖ್ಯೆ ಏರುತ್ತಾ ಬಂದಿತು. ಈ ಶಾಲೆಯಲ್ಲಿ ಕರುಣಾಗೃಹದ ಸುಮಾರು ಮೂವತ್ತು ಅಂಗವಿಕಲ ಮಕ್ಕಳೂ ಇದ್ದರು. ಮಕ್ಕಳ ಸಂಖ್ಯೆಯಲ್ಲಿ ಅರ್ಧದಷ್ಟು ಬಾಲಕಿಯರದೇ ಆಗಿತ್ತು. ಶಾಲೆ ಒಳ್ಳೆಯ ಕಟ್ಟಡದಲ್ಲಿ ನಡಯುತ್ತಿತ್ತು. ಆಟದ ಮೈದಾನ, ಪುಸ್ತಕಾಲಯ, ಕ್ರಿಡೋಪಕರಣಗಳು, ಶೌಚಾಲಯ ಮುಂತಾದ ಎಲ್ಲ ಸೌಕರ್ಯಗಳೂ ಇದ್ದವು. ಮುಂದೆ ಪ್ರತಿವರ್ಷದಂತೆ ಇಲಾಖೆಯಿಂದ ಮಾನ್ಯತೆಯನ್ನು ನವೀಕರಿಸಿಕೊಳ್ಳಬೇಕಾಯಿತು. ಆಗ ಶಿಕ್ಷಣ ಇಲಾಖೆ ಸಹಕರಿಸಲಿಲ್ಲ. ಐದನೇ ತರಗತಿಯನ್ನು ಪ್ರಾರಂಭಿಸುವಾಗ ಇಲಾಖಾ ಅನುಮತಿ ಪಡೆದಿಲ್ಲವೆಂಬ ಕಾರಣದಿಂದ ಮಾನ್ಯತೆಯನ್ನು ನವೀಕರಿಕೊಡಲಿಲ್ಲ. ಕನ್ನಡ ಮಾಧ್ಯಮದ ಶಾಲೆ, ಅಂಗವಿಕಲ ಮಕ್ಕಳೂ ಓದುತ್ತಿರುವ ಶಾಲೆ, ಹೆಚ್ಚಾಗಿ ಬಾಲಕಿಯರೇ ಇರುವ ಶಾಲೆ, ಸ್ವಂತ ಕಟ್ಟಡ ಹೊಂದಿರುವ ಶಾಲೆ, ಅನುದಾನ ಕೋರದೇ ಇರುವ ಶಾಲೆ ಇದಾಗಿರುವುದರಿಂದ ಸ್ವಾಭಾವಿಕ ಬೆಳವಣಿಗೆಯ ನಿಯಮವನ್ನ ಸಡಿಲಿಸಿ ಮಾನ್ಯತೆಯನ್ನು ನವೀಕರಿಸಿಕೊಡಬೇಕೆಂದು ಕಂಡ ಕಂಡ ಸರ್ಕಾರಿ ಅಧಿಕಾರಿಗಳನ್ನು ವಿನಂತಿಸಲಾಯಿತು. ಇಲಾಖೆ ಕೇಳಿ–ಕೇಳಿದ ವಿವರಗಳನ್ನು ಪದೇ ಪದೇ ಕೊಡಲಾಯಿತು. ಆದರೂ ಕೂಡ ಮಾನ್ಯತೆಯ ನವೀಕರಣ ಸಾಧ್ಯವಾಗಲೇ ಇಲ್ಲ. ಆ ವೇಳೆಗೆ ಜನಪದ ವಿದ್ಯಾಲಯದಲ್ಲಿ ಒಂದರಿಂದ ಏಳು ತರಗತಿಗಳು ನಡೆಯುತ್ತಿದ್ದವು. ಸುಮಾರು ಇನ್ನೂರು ಮಕ್ಕಳೂ, ಐದಾರು ಜನ ಉಪಾಧ್ಯಾಯ–

ಉಪಾಧ್ಯಾಯಿನಿಯರೂ ಕೆಲಸ ಮಾಡುತ್ತಿದ್ದರು.

ಎಷ್ಟೆಲ್ಲ ಪ್ರಯತ್ನ ಮಾಡಿದ ಮೇಲೂ, ಪತ್ರವ್ಯವಹಾರ, ಝುರಾಕ್ಸ್ ಮತ್ತು ಪ್ರಯಾಣ ಇತ್ಯಾದಿಗಳಿಗೆ ಸಾವಿರಾರು ರೂಪಾಯಿ ಖರ್ಚು ಮಾಡಿದ ಮೇಲೂ, ಶಿಕ್ಷಣ ಅಧಿಕಾರಿಗಳ ಭೇಟಿ ಮತ್ತು ಶಾಲೆ ಕುರಿತಾಗಿ ಒಳ್ಳೆಯ ಅಭಿಪ್ರಾಯ ದಾಖಲಾದ ನಂತರವೂ ಮಾನ್ಯತೆಯನ್ನು ನವೀಕರಿಸಲು ಸಾಧ್ಯವಾಗದೇ ಇರುವ ಪರಿಸ್ಥಿತಿ ಉಂಟಾದ ಮೇಲೆ ಜನಪದ ವಿದ್ಯಾಲಯವನ್ನು ಮುಚ್ಚುವುದು ಅನಿವಾರ್ಯವಾಯಿತು. ಆದರೆ ಆ ಶಾಲೆಯಲ್ಲಿ ಓದಿದ ಮಕ್ಕಳು ಇಂದು ಪ್ರಬುದ್ಧರಾಗಿದ್ದಾರೆ, ಪ್ರಗತಿ ಸಾಧಿಸಿದ್ದಾರೆ ಎಂಬುದಕ್ಕೆ ಜನಪದ ವಿದ್ಯಾಲಯ ಮೂಕ ಸಾಕ್ಷಿಯಾಗಿದೆ. ಶಾಲೆಯ ಮಕ್ಕಳ ತಂದೆ-ತಾಯಿಗಳು ಇಂದಿಗೂ ವಿದ್ಯಾಲಯವನ್ನು ನೆನೆಯುತ್ತಾರೆ. ಅದು ಮುಚ್ಚಿಹೋದುದಕ್ಕಾಗಿ ವಿಷಾದ ವ್ಯಕ್ತ ಪಡಿಸುತ್ತಾರೆ. ವಿದ್ಯಾಲಯದಲ್ಲಿ ಅನೇಕ ಪಠ್ಯೇತರ ಕಾರ್ಯಕ್ರಮಗಳು ನಡೆಯುತ್ತಿದ್ದವು. ಅವುಗಳಲ್ಲಿ ಪ್ರಮುಖವಾದದ್ದು ಎರಡು ಬಾರಿ ನಡೆಯುತ್ತಿದ್ದ ಮಕ್ಕಳ ಶಿಬಿರಗಳು ದಸರಾ ರಜೆ ಸಮಯದಲ್ಲಿ "ನವರಾತ್ರಿ" ಹೆಸರಿನಲ್ಲೂ ಬೇಸಿಗೆ ರಜೆ ಸಮಯದಲ್ಲಿ "ದೊಡ್ಡ ಮರದಾ ನೆರಳಿನಲಿ" ಎಂಬ ಹೆಸರಿನಲ್ಲೂ ಶಿಬಿರಗಳು ನಡೆಯುತ್ತಿದ್ದವು. ಮಕ್ಕಳು ನಾಟಕ ಮಾಡುತ್ತಿದ್ದರು. ಗ್ರಾಮಸ್ಥರೆಲ್ಲ ಬಂದು ನೋಡಿ ಸಂತೋಷ ಪಡುತ್ತಿದ್ದರು. ಒಂದು ಒಳ್ಳೆಯ ಕೆಲಸ ಆಡಳಿತಾತ್ಮಕ ಸಮಸ್ಯೆಯ ಜೇಡರ ಬಲೆಗೆ ಸಿಕ್ಕು ಜೀವ ಕಳೆದುಕೊಂಡಿತು.

(ಮುಂದುವರಿಯುವುದು...)

* * *

ಸಂತಾಪ

ಕರ್ನಾಟಕ ರಾಜ್ಯ ಸರ್ವೋದಯ ಆಂದೋಲನದ ಹಿರಿಯ ಮುಖಂಡರು, ಹೋರಾಟಗಾರರು, ವ್ಯಾಖ್ಯಾನಕಾರರು ಮತ್ತು ಚಿಂತಕರು ಆಗಿದ್ದ ಸತ್ಯವ್ರತರು ಮಾರ್ಚ್ ೧೩, ೨೦೦೯ರಂದು ತಮ್ಮ ೭೯ನೇ ವಯಸ್ಸಿನಲ್ಲಿ ನಿದನರಾದರು. ಜೀವಿತದ ಕೊನೆಯ ವರೆಗೂ ಸರ್ವೋದಯ ಸಿದ್ಧಾಂತ ಕುರಿತು ವಿಚಾರ, ಮನನ, ಲೇಖನ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅವರ ಆತ್ಮಕ್ಕೆ ಜನಪದ ವಿಚಾರ ಶಾಂತಿಯನ್ನು ಕೋರುತ್ತದೆ. ಅವರ ಬಾಳಸಂಗಾತಿ ಲಕ್ಷ್ಮಿಯವರ ದುಃಖದಲ್ಲಿ ಸಹಭಾಗಿಯಾಗಿದೆ.

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾ ಸ್ಮರಿಸುತ್ತದೆ.

ಶ್ರೀ.ಎಂ.ಜಿ.ಶಿವರಾಂ; ಶ್ರೀ ಭೀಮಸೇನ ಅಥಣೀಕರ್-ಬೆಂಗಳೂರು

ಶ್ರೀ.ಕೆ.ಸುಬ್ಬರಾವ್; ಶ್ರೀ.ಕೆ.ಜಿ.ಪ್ರಕಾಶ್; ಶ್ರೀ.ಜಿ.ಎನ್.ಕೃಷ್ಣಸ್ವಾಮಿ- ಮೈಸೂರು

ಈ ಬಂಧುಗಳು ತಮ್ಮ ಚಂದಾ ನವೀಕರಿಸಿದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ

ಶ್ರೀ ಬಿ.ಆರ್.ಶಶಿಧರ ಕಶ್ಯಪ್-ಮೈಸೂರು ಮತ್ತು

ಶ್ರೀ ಎಂ.ರಾಜು-ಶಿವಮೊಗ್ಗ ಇವರಿಗೆ ಕೃತಜ್ಞತೆಗಳು

* * *

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ
(–ಸಂಪಾದಕರು)

ತೆರೆದ–ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.DTP Sanketh, Melkote. Printed at Sanketh, Mudrana, Melkote. Phone : 08236 – 299998 e-mail : janapada@yahoo.com web : janapada.net